# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 25-07-2016ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| **ಶ್ರೀಯುತರುಗಳಾದ :** | |
| ಎಮ್. ಶಿವರಾಜು – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, ಅಧಿಕ ಕೌನ್ಸಿಲ್ ಕಾರ್ಯದರ್ಶಿ, |
| ವಿ.ವಿ.ಪಾರ್ತಿಬರಾಜನ್ – ಸದಸ್ಯರು | ಮುಖ್ಯಲೆಕ್ಕಾಧಿಕಾರಿ, ಮುಖ್ಯ ಆರ್ಥಿಕ ಅಧಿಕಾರಿ, |
| ಆರ್.ಪದ್ಮಾವತಿ ಅಮರ್‌ನಾಥ್ – ಸದಸ್ಯರು | ಆರೋಗ್ಯಾಧಿಕಾರಿ (ದಕ್ಷಿಣ), |
| ಲಲಿತ ತಿಮ್ಮನಂಜಯ್ಯ.ಕೆ.ಎಲ್.ಆರ್ – ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ-ಪಶ್ಚಿಮ) |
| ನೇತ್ರಾ ನಾರಾಯಣ್ – ಸದಸ್ಯರು | ತೋಟಗಾರಿಕೆ ಅಧೀಕ್ಷಕರು |
| ಎ. ಕೋದಂಡರೆಡ್ಡಿ – ಸದಸ್ಯರು | ಸಂಬಂಧಪಟ್ಟ ಅಧಿಕಾರಿಗಳು, |
| ಕೆ. ಪೂರ್ಣಿಮ – ಸದಸ್ಯರು | -- |
| ಕುಸುಮ. ಹೆಚ್ – ಸದಸ್ಯರು | -- |
| ಕೆ.ವಿ. ರಾಜೇಂದ್ರಕುಮಾರ್ – ಸದಸ್ಯರು | -- |
| ಅರುಣ ರವಿ – ಸದಸ್ಯರು | -- |
| **ಗೈರು ಹಾಜರಿದ್ದ ಸದಸ್ಯರು** | |
| ಉಮೇಸಲ್ಮ – ಸದಸ್ಯರು | -- |

***(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)***

### *01]. ವಿಷಯದ ಸಂಖ್ಯೆ: ತೆಆಸ್ಥಾಸ/04/2016-17*

ಆಯುಕ್ತರ ಟಿಪ್ಪಣಿ ದಿನಾಂಕ: 02.04.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯ ಸಭೆಯಲ್ಲಿ ತೆಗೆದುಕೊಂಡಿರುವ ವಿಷಯ ಸಂಖ್ಯೆ: ತೋಸ್ಥಾಸ/21/2015-16, ದಿನಾಂಕ: 08.01.2016ರ ನಿರ್ಣಯದಲ್ಲಿ, ದಿನಾಂಕ: 01.12.2015 ರಿಂದ 31.05.2016ರವರೆಗೆ ಉದ್ಯಾನವನಗಳ ನಿರ್ವಹಣೆಯನ್ನು ಹಾಲಿ ನಿರ್ವಹಣೆ ಮಾಡುತ್ತಿರುವ ಗುತ್ತಿಗೆದಾರರಿಂದಲೇ ಮುಂದುವರೆಸುವಂತೆ ಸಮಿತಿಯು ತೀರ್ಮಾನಿಸಿ ಹಾಗೂ 2015-16ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-0088 ರಲ್ಲಿರುವ ರೂ.3,000.00 ಲಕ್ಷಗಳ ಅನುದಾನವನ್ನು ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳಿಗೆ ಸಂಬಂಧಪಟ್ಟ ಬಾಕಿಯಿರುವ ಡಿ.ಸಿ.ಬಿಲ್ಲುಗಳನ್ನು ಹಂತಹಂತವಾಗಿ ಪಾಲಿಕೆಯ ನಿಯಮಾನುಸಾರ ಹಣ ಬಿಡುಗಡೆ ಮಾಡಿ, ಮರು ಹೊಂದಾಣಿಕೆ ಮಾಡಿಕೊಂಡಿರುವ ಸದರಿ ರೂ.3,000.00 ಲಕ್ಷಗಳ ಅನುದಾನವನ್ನು 2016-17ನೇ ಸಾಲಿನ ಆಯವ್ಯಯದಲ್ಲಿ ಮುಂದುವರೆದ ಕಾಮಗಾರಿಗಳ ಅನುದಾನದ ಅಡಿಯಲ್ಲಿ ಕಾದಿರಿಸಿಕೊಳ್ಳುವಂತೆ ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿದೆ.

ಮುಂದುವರೆದಂತೆ, ಲೆಕ್ಕಶೀರ್ಷಿಕೆ ಪಿ-0088 ಅಡಿಯಲ್ಲಿ ಕೈಗೊಂಡ ಉದ್ಯಾನವನಗಳ ನಿರ್ವಹಣೆ ಮತ್ತು ಅಭಿವೃದ್ಧಿ ಕಾಮಗಾರಿಗಳ ಬಾಕಿ ಬಿಲ್ಲುಗಳನ್ನು ಪಾವತಿಸಲು 2015-16ನೇ ಸಾಲಿನ ಲೆಕ್ಕಶೀರ್ಷಿಕೆ ಪಿ-0088 ಅಡಿ ಲಭ್ಯವಿರುವ ರೂ.30.00 ಕೋಟಿ ಅನುದಾನದಲ್ಲಿ ರೂ. 14.00 ಕೋಟಿಗಳನ್ನು ಮರುಹೊಂದಾಣಿಕೆ ಮಾಡುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

***02]. ವಿಷಯದ ಸಂಖ್ಯೆ: ತೆಆಸ್ಥಾಸ/21/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 13.06.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, Development of Various Works at Pit Colony Ground in Ward No.65, Malleshwaram ಕಾಮಗಾರಿಯ ಅಂದಾಜು ಪಟ್ಟಿಗೆ ಜಾಬ್ ಕೋಡ್ ಸಂಖ್ಯೆ : 065-12-000054 ನೀಡಲಾಗಿದ್ದು, ರೂ.200.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ದೊರೆತಿರುತ್ತದೆ. ಕಾರ್ಯಪಾಲಕ ಅಭಿಯಂತರರು, ಯೋಜನೆ (ಪಶ್ಚಿಮ)ರವರು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಿಯಮಾನುಸಾರವಾಗಿ ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ಸಂಖ್ಯೆ: 76/12-13, ದಿನಾಂಕ: 19-03-2013 ರಲ್ಲಿ ನೀಡಲಾಗಿರುತ್ತದೆ.

ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆರವರಿಗೆ ದಿನಾಂಕ: 02-07-2014 ಮತ್ತು 10-02-2015 ರಲ್ಲಿ ನೋಟೀಸ್ ನೀಡಿ ಕಾಮಗಾರಿಯನ್ನು ಪ್ರಾರಂಭಿಸದೇ ಇದ್ದಲ್ಲಿ ಕರಾರು ಪತ್ರವನ್ನು ರದ್ದುಗೊಳಿಸಲಾಗುವುದೆಂದು ತಿಳಿಸಲಾಗಿತ್ತು. ಆದರೆ ಸದರೀ ಸಂಸ್ಥೆಯವರು ಯಾವುದೇ ಲಿಖಿತ ರೂಪದಲ್ಲಿ ಉತ್ತರವನ್ನು ಪಾಲಿಕೆಗೆ ನೀಡಿರುವುದಿಲ್ಲ. ದಿ: 14-05-2015 ರಲ್ಲಿ ಮಾನ್ಯ ಆಯುಕ್ತರವರು ''JOB CODE IS FROZEN WORK SHALL NOT BE STARTED'' ಎಂದು ಆದೇಶ ನೀಡಿರುತ್ತಾರೆ.

ವಾರ್ಡ್ ಸಂಖ್ಯೆ 65ರ ಪಾಲಿಕೆ ಸದಸ್ಯರು ಮಾನ್ಯ ಆಯುಕ್ತರವರಿಗೆ ದಿನಾಂಕ : 08-01-2016 ರಲ್ಲಿ ಪತ್ರ ನೀಡಿ ಈಗಾಗಲೇ Freeze ಆಗಿರುವ ಕೆಲಸವನ್ನು Defreeze ಮಾಡಿ ಟೆಂಡರ್ ಮೂಲಕ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕಾಮಗಾರಿಗೆ ನೀಡಿರುವ ಕಾರ್ಯಾದೇಶವನ್ನು ರದ್ದುಗೊಳಿಸಿ, ಟೆಂಡರ್ ಕರೆಯಲು ಹಾಗೂ Defreeze ಆದೇಶಕ್ಕಾಗಿ ಮಾನ್ಯ ಆಯುಕ್ತರವರಿಗೆ ಸಲ್ಲಿಸಲಾಗಿದ್ದು, ಮಾನ್ಯ ಆಯುಕ್ತರವರು ದಿ: 12-02-2016 ರಲ್ಲಿ "ಮುಂದಿನ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳಿ, ಟೆಂಡರ್ ಪ್ರಕ್ರಿಯೆ ಆರಂಭಿಸಿರಿ" ಎಂದು ಆದೇಶ ನೀಡಿರುತ್ತಾರೆ.

ಮುಖ್ಯ ಆರ್ಥಿಕ ಅಧಿಕಾರಿಯವರು ದಿ: 02-04-2016 ರಲ್ಲಿ ಮಾನ್ಯ ಆಯುಕ್ತರ ಆದೇಶದಂತೆ ಮುಂದಿನ ಆರ್ಥಿಕ ವರ್ಷದಲ್ಲಿ ಅನುದಾನ ಒದಗಿಸಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ತಿಳಿಸಿರುವ ಕಾರಣ, ಸದರಿ ಕಾಮಗಾರಿಯ ಅಂದಾಜು ಪಟ್ಟಿಯ ಮೊತ್ತವು ಪ್ರಸಕ್ತ ಸಾಲಿನ ದರಪಟ್ಟಿಯಂತೆ ರೂ.250.00 ಲಕ್ಷಗಳಾಗುವುದರಿಂದ 2016-17ನೇ ಸಾಲಿನಲ್ಲಿ ಪಿ2145 ಅಡಿ ಅನುದಾನ ಒದಗಿಸಲು ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

| **Sl. No.** | **Name of Work** | **Estimate Cost (in Lakhs)** |
|---|---|---|
| 1 | Development of Various Works at Pit Colony Ground in Ward No.65. | 250.00 |

**ನಿರ್ಣಯ: ಸದರಿ ಕಾಮಗಾರಿಗಳನ್ನು ಈಗಾಗಲೇ ಪ್ರಾರಂಭಿಸಲಾಗಿದ್ದು, 2016-17ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದೆಂದು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿತು.**

***03]. ವಿಷಯದ ಸಂಖ್ಯೆ: ತೆಆಸ್ಥಾಸ/22/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 13.06.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮಲ್ಲೇಶ್ವರಂ ವಾರ್ಡ್ ಸಂಖ್ಯೆ : 65ರ ವ್ಯಾಪ್ತಿಯ ಕೋದಂಡರಾಂಪುರದಲ್ಲಿ ಬಿಬಿಎಂಪಿ ಶಾಲಾ ಕಟ್ಟಡ ಕಾಮಗಾರಿಯ ಅಂದಾಜು ಮೊತ್ತ ರೂ.100.00 ಲಕ್ಷಗಳಿಗೆ 2010-11ನೇ ಸಾಲಿನ ಆಯವ್ಯಯದ

ಲೆಕ್ಕಶೀರ್ಷಿಕೆ ಪಿ–2227 ಅಡಿ ಜಾಬ್ ಕೋಡ್ ಸಂಖ್ಯೆ : 065–11–000053 ನೀಡಲಾಗಿದ್ದು, ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ದೊರೆತಿರುತ್ತದೆ. ಕಾರ್ಯಪಾಲಕ ಅಭಿಯಂತರರು, ಯೋಜನೆ (ಪಶ್ಚಿಮ) ರವರು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಿಯಮಾನುಸಾರವಾಗಿ ಕಾಮಗಾರಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಮೂಲಕ ಗುತ್ತಿಗೆದಾರರಾದ ಶ್ರೀ ಸಿ.ಎನ್.ಎಸ್. ಮೂರ್ತಿರವರಿಗೆ ವಹಿಸಿ, ಈ ಕಛೇರಿ ಪತ್ರ ಸಂಖ್ಯೆ: EE(P-W)/WO/22/2015-16, ದಿನಾಂಕ: 22–04–2015 ರಲ್ಲಿ ಅನುಮೋದಿತ ಟೆಂಡರ್ ಮೊತ್ತ ರೂ.1,45,47,735=00 ಗಳಿಗೆ ಕಾರ್ಯಾದೇಶ ನೀಡಲಾಗಿರುತ್ತದೆ.

ಸದರಿ ಕಾಮಗಾರಿಯ ಜಾಬ್ ಕೋಡ್ ಸಂಖ್ಯೆ : 065–11–000053 ನ್ನು Freeze ಮಾಡಲಾಗಿದ್ದು, ಮಾನ್ಯ ಆಯುಕ್ತರವರು ದಿನಾಂಕ : 03–10–2015 ರಲ್ಲಿ "ವಿಲೇ ಇಡಿ" ಎನ್ನುವ ಆದೇಶವನ್ನು ನೀಡಿರುತ್ತಾರೆ.

ವಾರ್ಡ್ ಸಂಖ್ಯೆ : 65ರ ಪಾಲಿಕೆ ಸದಸ್ಯರು ಮಾನ್ಯ ಆಯುಕ್ತರವರಿಗೆ ಪತ್ರ ದಿನಾಂಕ : 08–01–2016 ರಲ್ಲಿ ಹಾಲಿ ಇರುವ ಬಿಬಿಎಂಪಿ ಹಳೆ ಹೆಂಚಿನ ಶಾಲಾ ಕಟ್ಟಡವು ಶಿಥಿಲಾವಸ್ಥೆಯಲ್ಲಿರುವುದರಿಂದ ಶಾಲೆ ನಡೆಸಲು ಕೊಠಡಿಗಳು ಇಲ್ಲದಂತಾಗಿ ಶಾಲಾ ಮಕ್ಕಳಿಗೆ ಬಹಳ ತೊಂದರೆಯಾಗಿದ್ದು, ಹೊಸ ಕಟ್ಟಡ ನಿರ್ಮಿಸುವುದು ಅತ್ಯವಶ್ಯಕವಾಗಿರುತ್ತದೆ. ಚುನಾವಣಾ ಕಾರಣದಿಂದಾಗಿ ಕಾಮಗಾರಿಯನ್ನು ಪ್ರಾರಂಭಿಸಲಾಗಿರಲಿಲ್ಲ.

ಆದುದರಿಂದ ಸದರೀ ಕಾಮಗಾರಿಯನ್ನು Defreeze ಮಾಡಲು ಕೋರಿರುತ್ತಾರೆ. ಮಾನ್ಯ ಆಯುಕ್ತರವರು ದಿನಾಂಕ: 04–03–2016 ರಲ್ಲಿ ''Continue the process, but include it in the next year's budget/Action plan for funds'' ಎಂದು ಆದೇಶ ನೀಡಿರುತ್ತಾರೆ.

ದಿನಾಂಕ 02–04–2016 ರಲ್ಲಿ ಮುಖ್ಯ ಆರ್ಥಿಕ ಅಧಿಕಾರಿಯವರು ಮುಂದಿನ ಆರ್ಥಿಕ ವರ್ಷದಲ್ಲಿ ಅನುದಾನ ಒದಗಿಸಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ತಿಳಿಸಿರುವ ಕಾರಣ, ಸದರಿ ಕಾಮಗಾರಿಯ ನಿರ್ಮಾಣಕ್ಕೆ ರೂ.150.00 ಲಕ್ಷಗಳಾಗುವುದರಿಂದ 2016–17ನೇ ಸಾಲಿನಲ್ಲಿ ಪಿ2227 ಅಡಿ ಅನುದಾನ ಒದಗಿಸಲು ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

| Sl. No. | Name of Work | Estimate Cost (in Lakhs) |
|---|---|---|
| 1 | Construction of School building at Kodandarampura in Ward No.65. | 150.00 |

**ನಿರ್ಣಯ: ಸದರಿ ಕಾಮಗಾರಿಗಳನ್ನು ಈಗಾಗಲೇ ಪ್ರಾರಂಭಿಸಲಾಗಿದ್ದು, 2016–17ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದೆಂದು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/29/2016–17***

ಆಯುಕ್ತರ ದಿನಾಂಕ: 27–05–2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ ಸಂಖ್ಯೆ: 93 'ವಸಂತನಗರ ಮಿಲ್ಲರ್ ಟ್ಯಾಂಕ್ ರಸ್ತೆಯಲ್ಲಿರುವ ಆಕ್ಟ್ರಾಯ್ ಗೋಡೌನ್ ಅಳತೆ 100x50 ಅಡಿಗಳ ಜಾಗವನ್ನು ಲಿಡ್ಕರ್ ಸಂಸ್ಥೆಗೆ ಕ್ರಯಕ್ಕೆ ನೀಡುವ ವಿಷಯದ ಬಗ್ಗೆ ವಿವರಿಸಿರುವಂತೆ, ವಾರ್ಡ್ ಸಂಖ್ಯೆ:93, ವಸಂತನಗರ ಮಿಲ್ಲರ್ ಕೆರೆ ಅಂಗಳದಲ್ಲಿ 100x50 ಅಡಿಗಳ ನಿವೇಶನದಲ್ಲಿರುವ 80x40 ಅಡಿಗಳ

ಗೋಡೌನ್ ಕಟ್ಟಡವನ್ನು ಕರ್ನಾಟಕ ಚರ್ಮ ಕೈಗಾರಿಕ ಅಭಿವೃದ್ಧಿ ನಿಗಮ ನಿಯಮಿತ ರವರಿಗೆ ಮಾಸಿಕ ಬಾಡಿಗೆ ರೂ.925/- ನಂತೆ ದಿನಾಂಕ: 09-06-1980 ರಿಂದ 11 ತಿಂಗಳ ಅವಧಿಗೆ ಗುತ್ತಿಗೆ ನೀಡಲಾಗಿರುತ್ತದೆ. ತದನಂತರ ದಿನಾಂಕ: 01-05-1981 ರಿಂದ 31-07-1999 ರವರೆಗೆ 219 ತಿಂಗಳ ಅವಧಿಗೆ ಅಂದಿನ ಮಾರುಕಟ್ಟೆ ದರದಂತೆ ಮಾಸಿಕ ಗುತ್ತಿಗೆ ರೂ.99,454.50/-ಗಳು ನಿಗದಿಪಡಿಸಿ ದಿನಾಂಕ: 14-07-2003 ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ನಿಗದಿಪಡಿಸಿರುವ ಗುತ್ತಿಗೆ ಮೊತ್ತವನ್ನು ಪಾವತಿಸದೇ ಸಂಸ್ಥೆಯು ನಷ್ಟದಲ್ಲಿರುವುದಾಗಿ ನಿಗದಿಪಡಿಸಿರುವ ಮೊತ್ತವನ್ನು ಪಾವತಿಸಲು ಶಕ್ತನಾಗಿಲ್ಲವೆಂದು ಗುತ್ತಿಗೆ ಮೊತ್ತವನ್ನು ಈ ತಹಲ್‌ವರೆವಿಗೂ ಪಾವತಿಸಿರುವುದಿಲ್ಲ.

ಈ ಮಧ್ಯ ಅಧ್ಯಕ್ಷ ಡಾ॥ ಜಗಜೀವನ್ ರಾಮ್ ಚರ್ಮ ಕೈಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ ರವರು ದಿನಾಂಕ: 24.01.2012 ರಂದು ಮಾನ್ಯ ಆಯುಕ್ತರಿಗೆ ಮನವಿ ಸಲ್ಲಿಸಿ 99 ವರ್ಷಗಳ ದೀರ್ಘಾವಧಿ ಗುತ್ತಿಗೆ ಅಥವಾ ಮಾರುಕಟ್ಟೆ ಬೆಲೆಗೆ ಕ್ರಯಕ್ಕೆ ನೀಡುವಂತೆ ಕೋರಿದ್ದು, ದಿ: 25-01-2012 ರಂದು ಆಸ್ತಿ ಶಾಖೆಯಿಂದ ಅಂತರಿಕ ಕಛೇರಿ ಟಿಪ್ಪಣಿ ನೀಡಲಾಗಿದ್ದು. ಸಹ ಕಂದಾಯ ಅಧಿಕಾರಿ (ವಸಂತನಗರ) ರವರು ವರದಿ ಮಾಡಿರುವಂತೆ 100x50 ಅಡಿಗಳ ನಿವೇಶನದಲ್ಲಿ 80x40 ಅಡಿ ಅಳತೆ ಗೋಡೌನ್ ಕಟ್ಟಡ ಹಾಗೂ ಈ ನಿವೇಶನಕ್ಕೆ ಹೊಂದಿಕೊಂಡಂತೆ ಹೆಚ್ಚುವರಿಯಾಗಿ 2 ಭದ್ರತಾ ಕೊಠಡಿ ಶೆಡ್‌ಗಳು ಇದ್ದು, ವಿಸ್ತೀರ್ಣ 25x30 ಚದರ ಅಡಿಗಳಾಗಿದ್ದು, ಒಟ್ಟಾರೆ 5750 ಚದರ ಅಡಿ ಆಗಿರುತ್ತದೆಂದು ಸದರಿ ಜಾಗವನ್ನು ಗುತ್ತಿಗೆ ಅಥವಾ ಕ್ರಯಕ್ಕೆ ಮಾರುಕಟ್ಟೆ ಬೆಲೆಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನ ಕೋರಿ ಆಸ್ತಿ ಶಾಖೆಗೆ ಕಡತ ಮಂಡಿಸಿರುತ್ತಾರೆ.

ಪ್ರಸಕ್ತ ಮಾರುಕಟ್ಟೆ ದರ ಚದರ ಅಡಿ 1ಕ್ಕೆ ರೂ.4,500/- ವಾಣಿಜ್ಯಕ್ಕೆ ಶೇ.40% ರಷ್ಟು ಸೇರಿಸಿದಾಗ ಚದರ ಅಡಿ 1ಕ್ಕೆ ರೂ. 6,300/-ಗಳು 5750 ಚದರ ಅಡಿಗಳಿಗೆ (5750x6300=3,62,25,000/-) 3,62,25,000/- ರೂಗಳಾಗುತ್ತದೆ. ಸ್ವತ್ತಿನ ಮೌಲ್ಯದ ಶೇ 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ ಗುತ್ತಿಗೆ ಮೊತ್ತ ರೂ. 36,22,500/-ರೂಗಳು ಮಾಸಿಕ ರೂ. 3,01,875/- ಗಳಾಗುತ್ತದೆ.

ಇದು ರಾಜ್ಯ ಸರ್ಕಾರದ ಸಂಸ್ಥೆಯಾಗಿದ್ದು, ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ ಜನಾಂಗದವರ ಏಳಿಗೆಗಾಗಿ ನಡೆಸಲಾಗುತ್ತಿರುವ ಸಂಸ್ಥೆಯಾಗಿದ್ದು. ಇದಕ್ಕೆ ಮಾಸಿಕ ಗುತ್ತಿಗೆ ರೂ.99,454.50/- ಪೈಸೆ ನಿಗದಿಪಡಿಸಿರುವುದು ಅವೈಜ್ಞಾನಿಕವಾಗಿರುತ್ತದೆ. ಇಂತಹ ಸಂಸ್ಥೆಗಳಿಗೆ ರಿಯಾಯಿತಿ ದರದಲ್ಲಿ ಗುತ್ತಿಗೆ ನಿಗದಿಪಡಿಸುವ ಅವಕಾಶ ಇರುವ ಹಿನ್ನೆಲೆಯಲ್ಲಿ ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಕರಾರು ಪತ್ರ ನೊಂದಾಯಿಸುವ ಹಿಂದಿನ ದಿನಾಂಕದವರೆಗೆ ಮತ್ತು ಕರಾರು ಪತ್ರ ನೊಂದಾಯಿಸುವ ದಿನಾಂಕದಿಂದ ಮುಂದಿನ 30 ವರ್ಷಗಳ ಅವಧಿಗೆ ಪ್ರತ್ಯೇಕ ಪ್ರತ್ಯೇಕವಾಗಿ ದರ ನಿಗದಿಪಡಿಸಿ ಗುತ್ತಿಗೆ ನವೀಕರಿಸಲು ಸ್ಥಾಯಿ ಸಮಿತಿಗಳು ಪಾಲಿಕೆ ಸಭೆ ಮುಖಾಂತರ ಸರ್ಕಾರಕ್ಕೆ ಪ್ರಸ್ತಾಪಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬಿಬಿಎಂಪಿ ಸಭೆ ಮುಂದೆ ಮಂಡಿಸಲಾಗಿ ದಿನಾಂಕ:28-02-2012ರ ಮಾನ್ಯ ಆಯುಕ್ತರವರ ಟಿಪ್ಪಣಿಯನ್ನು ವಿಷಯದ ಸಂಖ್ಯೆ:ನಯೋಅಸ್ಥಾಸ /232/2011-12 ದಿನಾಂಕ:06-03-2012 ರಂದು ಒಪ್ಪಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿ ಮಂಡಿಸಲಾಗಿ ವಿಷಯದ ಸಂಖ್ಯೆ:ತೆಆಸ್ಥಾಸ/562/2011-12 ದಿನಾಂಕ: 20-06-2012 ರಂದು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ನಿರ್ಣಯವನ್ನು ಒಪ್ಪಿ ಬಿಬಿಎಂಪಿ ಸಭೆ ಮುಂದೆ ಮಂಡಿಸಿದ್ದು, ವಿಷಯದ ಸಂಖ್ಯೆ:13(161)2012-13 ದಿ:30-03-2012 ರಂದು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುವುದೆಂದು ನಿರ್ಣಯಿಸಲಾಗಿದ್ದು, ಸ್ಥಾಯಿ ಸಮಿತಿಗಳು ಹಾಗೂ ಬಿಬಿಎಂಪಿ ಸಭೆಯ ನಿರ್ಣಯದ ಬಗ್ಗೆ ಸರ್ಕಾರದ ಅನುಮೋದನೆ ಪಡೆದು ಕಳುಹಿಸಲು ಕೋರಲಾಗಿತ್ತು.

ಈ ಮೇರೆಗೆ ಸರ್ಕಾರದ ಆದೇಶ ಸಂಖ್ಯೆ:ನಅಇ 69 ಎಂಎನ್‌ಜಿ 2013 ಬೆಂಗಳೂರು ದಿನಾಂಕ: 10-12-2015 ರಂದು ವಾರ್ಡ್ ಸಂಖ್ಯೆ:93, ವಸಂತನಗರ, ಮಿಲ್ಲರ್ ಕೆರೆ ಅಂಗಳದಲ್ಲಿನ ಆಕ್ಟ್ರಾಯ್ ಗೋಡೌನ್ ಅಂಗಳದಲ್ಲಿನ 100x50 ಅಡಿಗಳ ಸ್ವತ್ತನ್ನು ಡಾ॥ ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ

ನಿಗಮ ನಿಯಮಿತ ಸಂಸ್ಥೆಗೆ ಮಾರುಕಟ್ಟೆ ಬೆಲೆಯ ಶೇ 50% ರಷ್ಟಕ್ಕೆ ಕ್ರಯಕ್ಕೆ ನೀಡಲು ಸರ್ಕಾರವು ಅನುಮೋದನೆ ನೀಡಿರುತ್ತದೆ. ಈ ಸಂಬಂಧ ಪಾಲಿಕೆಯ ಸಂಬಂಧಪಟ್ಟ ಸ್ಥಾಯಿ ಸಮಿತಿಗಳು ಹಾಗೂ ಬಿಬಿಎಂಪಿ ಸಭೆಯ ಅನುಮೋದನೆ ಪಡೆಯತಕ್ಕದು ಎಂದು ಆದೇಶಿಸಿದೆ.

ಪ್ರಸ್ತಾಪಿತ ಸ್ವತ್ತಿನ ಮೌಲ್ಯ ದಿನಾಂಕ: 28-03-2016ರ ಸರ್ಕಾರದ ಪರಿಷ್ಕೃತ ಮಾರ್ಗಸೂಚಿ ದರದಂತೆ ವಸಂತನಗರ ಮಿಲ್ಲರ್ ಟ್ಯಾಂಕ್ ಬಂಡ್ ರಸ್ತೆ ಮಾರ್ಗಸೂಚಿ ದರವು ಚದರ ಮೀಟರ್ 1ಕ್ಕೆ 94800/- ರೂಗಳಾಗಿದ್ದು, ಚದರಡಿ 1ಕ್ಕೆ (94800/10764=8810) 8810/- ರೂಗಳಾಗುತ್ತದೆ. ವಾಣಿಜ್ಯಕ್ಕೆ ಶೇ 40% ರಷ್ಟು ಸೇರಿಸಿದಲ್ಲಿ ಸ್ವತ್ತಿನ ಮೌಲ್ಯ ಚದರಡಿ 1ಕ್ಕೆ 3524/- ರೂಗಳು ಒಟ್ಟು ಮೊತ್ತ ಚದರಡಿ 1ಕ್ಕೆ (8810+3524=12334/-) 12334/- ರೂಗಳಾಗುತ್ತದೆ. ಸ್ವತ್ತಿನ ವಿಸ್ತೀರ್ಣ 5000 ಚ.ಅ x ಮಾರ್ಗಸೂಚಿ ದರ ಚದರಡಿ 1ಕ್ಕೆ 12334 = ಸ್ವತ್ತಿನ ಒಟ್ಟು ಮೌಲ್ಯ ರೂ.6,16,70,000/- ಗಳಾಗುತ್ತದೆ. ಶೇ 50% ಅಂದರೆ ರೂ.3,08,35,000/- ಗಳಾಗುತ್ತದೆ.

**ಈ ಹಿನ್ನೆಲೆಯಲ್ಲಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಹಾಗೂ ಬಿಬಿಎಂಪಿ ಸಭೆಯ ಅನುಮೋದನೆಗಾಗಿ ಮಂಡಿಸಿರುವ ದಿನಾಂಕ: 27-05-2016ರ ಮಾನ್ಯ ಆಯುಕ್ತರ ಟಿಪ್ಪಣಿಯಂತೆ, ಸರ್ಕಾರದ ಆದೇಶ ಸಂಖ್ಯೆ: ನಅಇ 49 ಎಂಎನ್‌ಜಿ 2013, ಬೆಂಗಳೂರು ದಿನಾಂಕ: 10-12-2015ರಲ್ಲಿ 100ಥ50 ಅಡಿಗಳ ಸದರಿ ಸ್ವತ್ತನ್ನು ಡಾ॥ ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆಗೆ ಮಾರುಕಟ್ಟೆ ಬೆಲೆಯ ಶೇ 50% ರಷ್ಟಕ್ಕೆ ಕ್ರಯಕ್ಕೆ ನೀಡಲು ಸರ್ಕಾರವು ಆದೇಶಿಸಿರುವ ಹಿನ್ನೆಲೆಯಲ್ಲಿ ಮೇಲ್ಕಂಡ ಸಂಸ್ಥೆಗೆ ಸದರಿ ಸ್ವತ್ತನ್ನು ಕ್ರಯಕ್ಕೆ ನೀಡಲು ಸರ್ವಾನುಮತದಿಂದ ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆಯ ದಿನಾಂಕ 21.06.2016ರ ನಿರ್ಣಯ.**

**ನಿರ್ಣಯ: ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 21.06.2016ರ ನಿರ್ಣಯವನ್ನು ಒಪ್ಪಲು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/30/2016-17***

ಆಯುಕ್ತರ ದಿನಾಂಕ: 22.05.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ.ಹೆಚ್.ಮಂಜುನಾಥ್, ಸದಸ್ಯರು, ಬಿಬಿಎಂಪಿ ಸುಬ್ರಮಣ್ಯನಗರ, ವಾರ್ಡ್ ನಂ:66 ಹಾಗೂ ಸದಸ್ಯರು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಮಿತಿ ರವರು ದಿನಾಂಕ: 15-10-2015 ರಂದು ಮನವಿ ಸಲ್ಲಿಸಿ, ಸುಬ್ರಮಣ್ಯನಗರ, 41ನೇ ಮುಖ್ಯರಸ್ತೆ, ಬಿ ಬ್ಲಾಕ್‌ನಲ್ಲಿರುವ ಬಿಬಿಎಂಪಿ ಕಟ್ಟಡವು ಖಾಲಿ ಇರುವುದರಿಂದ ಈ ಪೈಕಿ 2 ಚದರ ಕಟ್ಟಡವನ್ನು ಬೆಂಗಳೂರು ಒನ್ ಕೇಂದ್ರ ಕಛೇರಿಯನ್ನು ತೆರೆದು ಕಟ್ಟಡದಲ್ಲಿ ಸಾರ್ವಜನಿಕರ ಬಹುಪಯೋಗಿ ಬೆಂಗಳೂರು ಒನ್ ಸಹಾಯ ಕೇಂದ್ರ ಪ್ರಾರಂಭಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಮಲ್ಲೇಶ್ವರಂ) ಉಪ ವಿಭಾಗ ರವರು ನೀಡಿರುವ ವರದಿಯಂತೆ ವಾರ್ಡ್ ನಂ:66 ರಲ್ಲಿ ಸುಬ್ರಮಣ್ಯನಗರ 4ನೇ ಮುಖ್ಯರಸ್ತೆ, ಬಿ ಬ್ಲಾಕ್ ನಲ್ಲಿರುವ ಬಿಬಿಎಂಪಿ ಕಟ್ಟಡದಲ್ಲಿರುವ ಒಂದನೇ ಮಹಡಿಯಲ್ಲಿ Day care center, 2ನೇ ಮಹಡಿಯಲ್ಲಿ ಲೈಬ್ರರಿಯಾಗಿ ಉಪಯೋಗಿಸುತ್ತಿದ್ದು, ಮೊದಲನೇ ಮಹಡಿಯಲ್ಲಿ ಸುಮಾರು 8 ರಿಂದ 9 ಚದರಗಳು ಖಾಲಿ ಇದ್ದು, ಈ ಪೈಕಿ ಸುಮಾರು 2 ಚದರಗಳನ್ನು ಬೆಂಗಳೂರು ಒನ್ ನೀಡಬಹುದಾಗಿರುತ್ತದೆ ಎಂದು ಹಾಗೂ ಕಟ್ಟಡದ ಬಾಡಿಗೆಯನ್ನು ಮಾಸಿಕ ರೂ.4043/- ಗಳನ್ನು ಲೆಕ್ಕಚಾರ ಮಾಡಿ ದೃಢೀಕರಣ ತ:ಖ್ತೆ ಹಾಗೂ ನಕ್ಷೆಯೊಂದಿಗೆ ವರದಿಸಿರುತ್ತಾರೆ.

ಪಶ್ಚಿಮ ವಲಯದ ಇತರೆ ಇಲಾಖಾಗಳ ಮುಖ್ಯಸ್ಥರಾದ ತೋಟಗಾರಿಕೆ ಅಧೀಕ್ಷಕರು, ವಿದ್ಯಾಧಿಕಾರಿಗಳು, ಕಲ್ಯಾಣಾಧಿಕಾರಿಗಳು ಹಾಗೂ ಆರೋಗ್ಯಾಧಿಕಾರಿ (ಮಲ್ಲೇಶ್ವರಂ) ರವರು ಸದರಿ ಪಾಲಿಕೆಯ ಕಟ್ಟಡದ ಮೊದಲನೆ ಮಹಡಿಯ ಪ್ರಸ್ತಾಪಿತ ಜಾಗವು ಸದರಿ ಕಛೇರಿಗಳಿಗೆ ಅವಶ್ಯಕತೆ ಇರುವುದಿಲ್ಲವೆಂದು ವರದಿಸಿರುತ್ತಾರೆ.

ಈ ಬಗ್ಗೆ ಸರ್ಕಾರದ ಆದೇಶ ಹಾಗೂ ಕಾಯ್ದೆಯ ವಿವರ ಕೆಳಕಂಡಂತೆ ಇರುತ್ತದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆ 1976ರ ಕಲಂ 176 ಹಾಗೂ 176ರ (6) ಹಾಗೂ (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ, 3 ವರ್ಷಗಳವರೆಗೂ ಗುತ್ತಿಗೆ ನೀಡುವ ಅಧಿಕಾರವು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳಿಗೆ, 5 ವರ್ಷದವರೆಗೂ ಗುತ್ತಿಗೆ ನೀಡುವ ಅಧಿಕಾರವು ಮಹಾನಗರ ಪಾಲಿಕೆಯ ಸಭೆಗೆ ಇರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಘನ ಸರ್ಕಾರಕ್ಕೆ ಅಧಿಕಾರವಿರುತ್ತದೆ.

ಈ ಬಗ್ಗೆ ವಲಯಾಧಿಕಾರಿಗಳು PWD ಇಲಾಖೆಯ ನಿಗಧಿಪಡಿಸುವ ಕಟ್ಟಡದ ಬಾಡಿಗೆ ಮೊತ್ತದ ಮಾನದಂಡವನ್ನು ಅನುಸರಿಸಿ ವಿಸ್ತೀರ್ಣಕ್ಕೆ ಅನುಗುಣವಾಗಿ ಹಾಲಿ ಬಾಡಿಗೆ ಮೊತ್ತವನ್ನು ನಿಗಧಿಪಡಿಸಬಹುದಾಗಿರುತ್ತದೆ.

1. **ಘನ ಸರ್ಕಾರವು ಆದೇಶ ಸಂಖ್ಯೆ: ನಅಇ 129 ಟಿ.ಎಂ.ಡಿ 2002 ದಿನಾಂಕ:02-06-2003 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂದು ಆದೇಶಿಸಿರುತ್ತದೆ.**
2. ಪಾಲಿಕೆಯ ಕೆ.ಎಂ.ಸಿ.ಕಾಯ್ದೆ 1976 ರ ನಿಯಮ 176 (6) ರಂತೆ Not with standing anything contained in this Act —
   a) No movable property exceeding such sum in value as may be prescribed shall be sold otherwise than by public auction;
   b) (i) No property whether movable or immovable of whatever value shall be transferred free of cost or for an upset price;
      (ii) no lease of any immovable property exceeding five years shall be granted;
      (iii) no immovable property shall be disposed of by sale or by other transfer;

   Except with the previous sanction of the Government.

ಆದ್ದರಿಂದ, ವಾರ್ಡ್ ನಂ:66, ಸುಬ್ರಮಣ್ಯನಗರ, 41ನೇ ಮುಖ್ಯರಸ್ತೆ, ಬಿ ಬ್ಲಾಕ್‌ನಲ್ಲಿರುವ ಬಿಬಿಎಂಪಿ ಕಟ್ಟಡವು ಬೆಂಗಳೂರು ಒನ್ ಸೇವಾ ಕೇಂದ್ರಕ್ಕಾಗಿ ಇ-ಆಡಳಿತ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ ಈ ಕೆಳಕಂಡ ನಿಬಂಧನೆಗಳನ್ನು ವಿಧಿಸಬಹುದಾಗಿರುತ್ತದೆ.

ಷರತ್ತುಗಳು:-

1. ನಿರ್ದೇಶಕರು, ಇ.ಡಿ.ಸಿ.ಎಸ್ ರವರ ಕೋರಿಕೆಯಂತೆ ಸಹಾಯಕ ಕೇಂದ್ರಗಳ ಸ್ವಾಧೀನವನ್ನು ಬಿಬಿಎಂಪಿಯಲ್ಲಿ ಉಳಿಸಿಕೊಂಡು ನಿರ್ವಹಣೆಯನ್ನು ಇ ಆಡಳಿತ ಇಲಾಖೆಗೆ ನೀಡಬಹುದಾಗಿರುತ್ತದೆ.
2. ಬಿಬಿಎಂಪಿ ಸಲಹಾ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಆಸ್ತಿ ತೆರಿಗೆ ಮತ್ತು ಇತರೆ ಕಛೇರಿ ಕಾರ್ಯಗಳಿಗೆ ಸಂಬಂಧಿಸಿದಂತೆ ಸೂಕ್ತ ಷರತ್ತುಗಳನ್ನು ವಿಧಿಸಬಹುದಾಗಿರುತ್ತದೆ.

3. ನಿರ್ದೇಶಕರು, ಇ.ಡಿ.ಸಿ.ಎಸ್ ರವರ ಕೋರಿಕೆಯಂತೆ ಸಹಾಯಕ ಕೇಂದ್ರಗಳ ಸ್ವಾಧೀನವನ್ನು ಬಿಬಿಎಂಪಿಯಲ್ಲಿ ಉಳಿಸಿಕೊಂಡು ಅವಧಿಯ ಬಗ್ಗೆ ಸೂಕ್ತ ತೀರ್ಮಾನವನ್ನು ಘನ ಸರ್ಕಾರದಿಂದ ಪಡೆದುಕೊಂಡು ಪಾಲಿಕೆಗೆ ಅವಶ್ಯಕತೆ ಇದ್ದಲ್ಲಿ ಯಾವುದೇ ತಿಳುವಳಿಕೆ ಪತ್ರ ನೀಡದೇ ಹಿಂಪಡೆಯುವ ಷರತ್ತಿಗೆ ಘನ ಸರ್ಕಾರವು ಉಚಿತವಾಗಿ ಹಾಗೂ ಗುತ್ತಿಗೆ ಅವಧಿಯನ್ನು ನಿಗಧಿಪಡಿಸಿ ನೀಡುವ ಬಗ್ಗೆ ಕೈಗೊಳ್ಳುವ ತೀರ್ಮಾನಕ್ಕೆ ಒಳಪಟ್ಟು ನಿರ್ವಹಣೆಯನ್ನು ಇ–ಆಡಳಿತ ಇಲಾಖೆಗೆ ನೀಡಬಹುದಾಗಿರುತ್ತದೆ.

ಬಿಬಿಎಂಪಿ ಸಲಹಾ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಆಸ್ತಿ ತೆರಿಗೆ ಮತ್ತು ಇತರೆ ಕಛೇರಿ ಕಾರ್ಯಗಳಿಗೆ ಸಂಬಂಧಿಸಿದಂತೆ ಸೂಕ್ತ ಷರತ್ತುಗಳನ್ನು ಹಾಗೂ ಉಪ ಆಯುಕ್ತರು (ಕಂದಾಯ) ರವರಿಂದ ಅಭಿಪ್ರಾಯವನ್ನು ಪಡೆದು Modus operandi – MOU/Lease Rental Agreement ಗಳನ್ನು ಕಾನೂನಿನ ನಿಯಮಾನುಸಾರದ ಕ್ರಮದಡಿಯಲ್ಲಿ ಮಾಡಿಕೊಂಡು ಕ್ರಮವಿಡುವ ಷರತ್ತಿಗೆ ಒಳಪಡಿಸಿ ಇ–ಆಡಳಿತ ಇಲಾಖೆಗೆ ನೀಡಬಹುದಾಗಿರುತ್ತದೆ.

ಕಟ್ಟಡ ವ್ಯಾಪ್ತಿಯ ವಿದ್ಯುತ್ ವೆಚ್ಚ, ನೀರಿನ ವೆಚ್ಚ, ಶುಚಿತ್ವ ಇತ್ಯಾದಿ ಬೆಂಗಳೂರು ಒನ್ ಸೇವಾ ಕೇಂದ್ರ ರವರು ನಿರ್ವಹಿಸತಕ್ಕದ್ದು.

ಆದುದರಿಂದ, ವಾರ್ಡ್ ನಂ:66, ಸುಬ್ರಮಣ್ಯನಗರ 41ನೇ ಮುಖ್ಯರಸ್ತೆ, ಬಿ ಬ್ಲಾಕ್‌ನಲ್ಲಿರುವ ಪಾಲಿಕೆಯ ಕಟ್ಟಡದ ಮೊದಲನೇ ಮಹಡಿಯ 8 ರಿಂದ 9 ಚದರಗಳ ಪೈಕಿ 2 ಚದರಗಳಲ್ಲಿ ಬೆಂಗಳೂರು ಒನ್ ಕೇಂದ್ರ ತೆರೆಯುವ ಬಗ್ಗೆ ಮೇಲ್ಕಂಡ ನಿಬಂಧನೆಗಳೊಂದಿಗೆ ಇ–ಆಡಳಿತ ಇಲಾಖೆಗೆ ನೀಡುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಪಾಲಿಕೆ ಸಭೆ ಮುಖಾಂತರ ಸರ್ಕಾರಕ್ಕೆ ಪ್ರಸ್ತಾಪಿಸಬೇಕಾಗಿದ್ದು, **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿರುವ ದಿನಾಂಕ: 22–05–2016ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಪರಿಶೀಲಿಸಿ, ವಾರ್ಡ್ ನಂ:66, ಸುಬ್ರಮಣ್ಯನಗರ 41ನೇ ಮುಖ್ಯರಸ್ತೆ, ಬಿ ಬ್ಲಾಕ್‌ನಲ್ಲಿರುವ ಪಾಲಿಕೆಯ ಕಟ್ಟಡದಲ್ಲಿ ಬೆಂಗಳೂರು ಒನ್ ಕೇಂದ್ರ ತೆರೆಯಲು ಸರ್ವಾನುಮತದಿಂದ ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆಯ ದಿನಾಂಕ 21.06.2016ರ ನಿರ್ಣಯ.**

**ನಿರ್ಣಯ: ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 21.06.2016ರ ನಿರ್ಣಯವನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/31/2016–17***

ಆಯುಕ್ತರ ದಿನಾಂಕ: 24.06.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕರ್ನಾಟಕ ಮುನ್ಸಿಪಲ್ ಕಾಯ್ದೆ 1976ರ ಕಲಂ 353 ರಂತೆ ಶೆಡ್ಯೂಲ್ X ರಲ್ಲಿರುವ ಉದ್ದಿಮೆಗಳ ಪಟ್ಟಿಯಲ್ಲಿರುವ ಉದ್ದಿಮೆಗಳ ಪಟ್ಟಿಯನ್ನು 1976ರಲ್ಲಿ ತಯಾರಿಸಿದ್ದು ಇದನ್ನು ಪರಿಷ್ಕರಿಸುವ ಕುರಿತು ಹಾಗೂ ಸದರಿ ಪಟ್ಟಿಯಲ್ಲಿ ಹೊಸದಾಗಿ 85 ಉದ್ದಿಮೆಗಳನ್ನು ಸೇರ್ಪಡಿಸುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ವಿಷಯ ಸಂಖ್ಯೆ:– ತೆಆಸ್ಥಾಸ/40/2015–16, ದಿನಾಂಕ:–27–02–2016 ರಂತೆ ಅನುಮೋಧನೆ ನೀಡಿದ್ದು ಸದರಿ ಉದ್ದಿಮೆಗಳಿಗೆ ಪರವಾನಿಗೆ ಶುಲ್ಕವನ್ನು ನಿಗಧಿ ಪಡಿಸಿ ಜಾರಿಗೊಳಿಸುವ ಕುರಿತು ಉದ್ದಿಮೆಗಳ ಶುಲ್ಕ ನಿಗಧಿಯ ವಿವರದೊಂದಿಗೆ ಸಲ್ಲಿಸಲು ತೀರ್ಮಾನಿಸಿರುವ ಹಿನ್ನಲೆಯಲ್ಲಿ ಸದರಿ ಉದ್ದಿಮೆಗಳಿಗೆ ಉದ್ದಿಮೆಯ ಅಳತೆಯ ಅನುಗುಣವಾಗಿ ಈಗಾಗಲೇ ಪರಿಷ್ಕೃತಗೊಂಡಿರುವ ಶುಲ್ಕದಂತೆ ಪಾರ್ಟ್ ರಲ್ಲಿ VI ರಲ್ಲಿ ಈ ಕೆಳಕಂಡಂತೆ ಶುಲ್ಕವನ್ನು ನಿಗಧಿ ಪಡಿಸಬಹುದಾಗಿದೆ.

| | | |
|---|---|---|
| [illegible]-6 | | |
| | [illegible] 1 [illegible] 5 [illegible] | |
| | [illegible] | 25,000 |
| (i) | [illegible] 2000 [illegible] | 10,000 |
| (ii) | [illegible] 1000 [illegible] 2000 [illegible] | 5,000 |
| (iii) | [illegible] 500 [illegible] 1000 [illegible] | 3,000 |
| (iv) | [illegible] 100 [illegible] 500 [illegible] | 2,000 |
| (v) | [illegible] 100 [illegible] | 1,000 |

ಅದರಂತೆ ಕರ್ನಾಟಕ ಮುನ್ಸಿಪಲ್ ಕಾಯ್ದೆ 1976ರ ಕಲಂ 353 ರಂತೆ ಶೆಡ್ಯೂಲ್ X ರಲ್ಲಿರುವ ಉದ್ದಿಮೆಗಳ ಪಟ್ಟಿಗೆ ಈಗಾಗಲೇ ಅನುಮೋಧನೆಗೊಂಡಿರುವ 85 ಹೊಸ ಉದ್ದಿಮೆಗಳಿಗೆ ಮೇಲ್ಕಂಡ ಚ.ಅ ಆಧಾರದ ಮೇಲೆ ಪರವಾನಿಗೆ ಶುಲ್ಕಗಳನ್ನು ನಿಗಧಿಪಡಿಸಬಹುದಾಗಿದ್ದು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಮಾನ್ಯ ಆಯುಕ್ತರ ದಿನಾಂಕ: 24.06.2016ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/32/2016–17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 01.07.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೆಂಗಳೂರು ಮಹಾನಗರದ ಸಾರ್ವಜನಿಕರ ಅನುಕೂಲಕ್ಕಾಗಿ, ಪಾಲಿಕೆಯ ವ್ಯಾಪ್ತಿಯಲ್ಲಿ ಬರುವಎಲ್ಲಾ ಪ್ರಧಾನ ಮತ್ತು ಉಪಪ್ರಧಾನ ರಸ್ತೆಗಳನ್ನು (Arterial and Sub Arterial) ಹಾಗೂ ಇತರೆ ರಸ್ತೆಗಳಲ್ಲಿ ಒಟ್ಟು 2212 ಸ್ಥಳಗಳಲ್ಲಿ, ತಲಾ 550 ಸ್ಥಳಗಳ ಪ್ಯಾಕೇಜ್‌ನಂತೆ, ಒಟ್ಟು 4 ಪ್ಯಾಕೇಜ್‌ಗಳಾನ್ನಾಗಿ (ಎ.ಬಿ.ಸಿ ಮತ್ತು ಡಿ) ವಿಂಗಡಿಸಿ ಸ್ಥಳ ಲಭ್ಯತೆಯ ಮೇರೆಗೆ ಶೌಚಾಲಯ ಸಹಿತ, Intelligence Transport System ಮತ್ತು Electronic Public Information System ಒಳಗೊಂಡ, ಪರಿಸರ ಸ್ನೇಹಿ ಬಸ್ ತಂಗುದಾಣಗಳನ್ನು ಪಿ.ಪಿ.ಪಿ. ಮಾದರಿಯಲ್ಲಿ ಬಿ.ಓ.ಟಿ ಆಧಾರದ ಮೇಲೆ 20 ವರ್ಷಗಳ ಜಾಹೀರಾತು ಗುತ್ತಿಗೆ ಅವಧಿಯೊಂದಿಗೆ (Concession Period) ಕರ್ನಾಟಕ ಘನ ಸರ್ಕಾರದ ಆದೇಶದ ಮೇರೆಗೆ, ಟೆಂಡರ್‌ನ್ನು ದಿನಾಂಕ: 16/07/2015 ರಂದು ಆಹ್ವಾನಿಸಲಾಗಿರುತ್ತದೆ.

ಬಿ.ಎಂ.ಟಿ.ಸಿ ಸಂಸ್ಥೆಯವರು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಸಂಸ್ಥೆಯವರು ಗುರುತಿಸಿರುವ ಈ ಎಲ್ಲಾ 2212 ಸ್ಥಳಗಳನ್ನು ಜಾಹೀರಾತು ಪ್ರದರ್ಶನಕ್ಕೆ ಸಾಮರ್ಥ್ಯವುಳ್ಳ ಮತ್ತು ಸಾಮರ್ಥ್ಯವುಳ್ಳದೇ ಇರುವ ಸ್ಥಳಗಳನ್ನು ಸಮಾನಾಂತರವಾಗಿ ಮಿಶ್ರ ಮಾಡಿ, 550 ಸ್ಥಳಗಳಿಗೆ ಒಂದು ಪ್ಯಾಕೇಜ್‌ನಂತೆ ಒಟ್ಟು (ಎ, ಬಿ, ಸಿ & ಡಿ) ಎಂದು ನಾಲ್ಕು ಪ್ಯಾಕೇಜ್‌ಗಳನ್ನಾಗಿ ವಿಂಗಡಿಸಲಾಗಿರುತ್ತದೆ.

ಸದರಿ ಟೆಂಡರ್‌ನಲ್ಲಿ ಉಲ್ಲೇಖ(3) ರ ಸರ್ಕಾರದ ಆದೇಶದನ್ವಯ ಜಾಹೀರಾತು ಪ್ರದರ್ಶನದಲ್ಲಿ ಶೇ.24.10 ರಷ್ಟು ಮೀಸಲಾತಿಯನ್ನು ಪ.ಜಾ/ ಪ.ಪಂ ಗಳ ಫಲಾಪೇಕ್ಷಿಗಳಿಗೆ, ಪ.ಜಾ/ಪ.ಪಂ ಗಳ ಆಡಳಿತ ಮಂಡಳಿ ಇರುವ ಸ್ವಯಂ ಸೇವಾಸಂಸ್ಥೆಗಳಿಗೆ ಮೀಸಲಾತಿಯನ್ನು ನಿಗದಿಪಡಿಸಲು ನೀಡಲು ಆದೇಶಿಸಿರುವ ಮೇರೆಗೆ, ಸದರಿ ಬಸ್ ತಂಗುದಾಣ ನಿರ್ಮಾಣ ಯೋಜನೆಯಲ್ಲಿಯೂ ಸಹ ಮೀಸಲಾತಿಯನ್ನು ಅನುಸರಿಸಿಕೊಂಡು ಮೇಲಿನ ನಾಲ್ಕು ಪ್ಯಾಕೇಜ್‌ಗಳ ಪೈಕಿ ಪ್ಯಾಕೇಜ್ 'ಎ' ನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ಭಾಗವಹಿಸಲು ಮೀಸಲಾಗಿರಿಸಿ ಉಳಿದ ಪ್ಯಾಕೇಜ್‌ಗಳಾದ 'ಬಿ' 'ಸಿ' ಹಾಗೂ 'ಡಿ' ಗಳನ್ನು ಸಾಮಾನ್ಯ ವರ್ಗದವರಿಗೆ ಭಾಗವಹಿಸಲು ಪರಿಗಣಿಸಿ ಹಾಗೂ ಸಾರ್ವಜನಿಕರ ಪ್ರಯಾಣಕ್ಕೆ ಅನುಕೂಲಕ್ಕಾಗಿ ತುರ್ತಾಗಿ

ಪರಿಸರ ಸ್ನೇಹಿ ಪ್ರಯಾಣಿಕರ ತಂಗುದಾಣಗಳನ್ನು ನಿರ್ಮಿಸಲು ಹಾಗೂ ಸ್ಥಳ ಹಾಗೂ ಸಾಧ್ಯವಿರುವ ಸ್ಥಳಗಳಲ್ಲಿ ಶೌಚಾಲಯ ಸಹಿತವಾಗಿ ಅಳವಡಿಸಲು ಯೋಜಿಸಲಾಗಿದೆ. ಬಿಎಂಟಿಸಿ ಸಂಸ್ಥೆಯು ಚತುರ ಸಂಚಾರ ವ್ಯವಸ್ಥೆ (Intelligence Transport System) ಯೋಜನೆಯನ್ನು ಚಾಲನೆಗೊಳಿಸಲು ಸಿದ್ದತೆ ಮಾಡಿದ್ದು, ತಂಗುದಾಣಗಳಲ್ಲಿ ಸಂಚರಿಸುವ ಬಸ್‌ಗಳ ವಿವರಗಳನ್ನು ಬಸ್ ಸಂಖ್ಯೆ, ಸಮಯ ಸಹಿತವಾಗಿ ಮಾಹಿತಿ ನೀಡುವ ವಿದ್ಯುನ್ಮಾನ ಪ್ರಯಾಣಿಕರ ಮಾಹಿತಿ ವ್ಯವಸ್ಥೆ (Electronic Public Information System) ಫಲಕಗಳನ್ನು ಅಳವಡಿಸಲು ಸಹ ಯೋಜಿಸಲಾಗಿದೆ ಹಾಗೂ ಈ ಎಲ್ಲಾ 2212 ಸ್ಥಳಗಳಲ್ಲಿ ಬಸ್ ತಂಗುದಾಣಗಳನ್ನು ಪಾಲಿಕೆ ನಿಗಧಿತ ಮಾದರಿ ನಕ್ಷೆಯಂತೆ, ಹಾಗೂ ಪಾಲಿಕೆ ನೀಡಿರುವ ವಿನ್ಯಾಸದಂತೆ ಆಸನ ವ್ಯವಸ್ಥೆ, ಬೆಳಕಿನ ವ್ಯವಸ್ಥೆ, ಕಸದಬುಟ್ಟಿ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಸಾರಾಗವಾಗಿ ಹತ್ತಿಇಳಿಯುವ ಸೌಲಭ್ಯ ಸಹಿತ ಇತರ ಸಕಲ ಸೌಲಭ್ಯಗಳೊಂದಿಗೆ ಪಿಪಿಪಿ ಮಾದರಿಯಲ್ಲಿ ಡಿ.ಬಿ.ಓ.ಟಿ ಆಧಾರದ ಮೇಲೆ ನಿರ್ಮಿಸಲು ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ.

ಪಾಲಿಕೆ RFP Document ನಲ್ಲಿ ನಮೂದಿಸಿರುವ Calendar of events ನ, ಪ್ರಕಾರ ದಿನಾಂಕ: 19.10.2015 ರಂದು ಸದರಿ ಟೆಂಡರ್‌ಗೆ ಪ್ರತಿಕ್ರಿಯಿಸಿರುವ ಏಜೆನ್ಸಿಗಳವರ ಬಿಡ್ಡ್‌ಗಳನ್ನು ತೆರೆಯಲಾಗಿರುತ್ತದೆ ಹಾಗೂ ಅವುಗಳ ವಿವರಗಳು ಈ ಕೆಳಗಿನಂತಿರುತ್ತವೆ.

| ಕ್ರ.ಸಂ. | ಪ್ಯಾಕೇಜ್‌ಗಳ ಸಂಖ್ಯೆ | ಭಾಗವಹಿಸಿದ ಏಜೆನ್ಸಿಗಳ ಹೆಸರು | ಷರಾ |
|---|---|---|---|
| 1 | ಪ್ಯಾಕೇಜ್ – ಎ | ಯಾವುದೇ ಏಜೆನ್ಸಿಗಳು ಭಾಗವಹಿಸಿರುವುದಿಲ್ಲ. | – |
| 2 | ಪ್ಯಾಕೇಜ್ – ಬಿ | ಮೆ॥ ಸೈನ್‌ಪೋಸ್ಟ್ ಇಂಡಿಯಾ ಪ್ರೈ.ಲಿ | ಇ.ಎಂ.ಡಿ. ಮೊತ್ತ ರೂ. 50.00 ಲಕ್ಷಗಳನ್ನು ಸಲ್ಲಿಸಿರುತ್ತಾರೆ. |
| 3 | ಪ್ಯಾಕೇಜ್ – ಸಿ | ಯಾವುದೇ ಏಜೆನ್ಸಿಗಳು ಭಾಗವಹಿಸಿರುವುದಿಲ್ಲ. | – |
| 4 | ಪ್ಯಾಕೇಜ್ – ಡಿ | 1) ಮೆ॥ ಟೈಮ್ಸ್ ಇನ್ನೋವೇಟಿವ್ ಮೀಡಿಯಾ ಪ್ರೈ.ಲಿ.<br>2) ಮೆ॥ ಪ್ರಕಾಶ್ ಆರ್ಟ್ಸ್ ಪ್ರೈ.ಲಿ. | ಇ.ಎಂ.ಡಿ. ಮೊತ್ತ ರೂ. 50.00 ಲಕ್ಷಗಳನ್ನು ಸಲ್ಲಿಸಿರುತ್ತಾರೆ. |

ಪ್ಯಾಕೇಜ್ – 'ಬಿ' & 'ಡಿ' ಗಳಿಗೆ ಭಾಗವಹಿಸಿರುವ ಏಜೆನ್ಸಿಗಳವರು ಸಲ್ಲಿಸಿರುವ ತಾಂತ್ರಿಕ ಬಿಡ್ಡ್‌ಗಳನ್ನು RFP Document ನಲ್ಲಿ ನಿಗಧಿಪಡಿಸಿರುವ ಷರತ್ತಿಗೆ ಅನುಗುಣವಾಗಿ ತಾಂತ್ರಿಕ ಮೌಲ್ಯ ಮಾಪನವನ್ನು ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ರಚಿಸಿರುವ ತಾಂತ್ರಿಕ ಮೌಲ್ಯ ಮಾಪನ ಸಮಿತಿಯಲ್ಲಿ ತಾಂತ್ರಿಕ ಮೌಲ್ಯ ಮಾಪನವನ್ನು ಮಾಡಲಾಗಿ,

ಪ್ಯಾಕೇಜ್ – 'ಬಿ' ಮೆ॥ ಸೈನ್‌ಪೋಸ್ಟ್ ಇಂಡಿಯಾ ಪ್ರೈ.ಲಿ ರವರು ಹಾಗೂ

ಪ್ಯಾಕೇಜ್ – 'ಡಿ' ಮೆ॥ ಟೈಮ್ಸ್ ಇನೋವೇಟಿವ್ ಮೀಡಿಯಾ ಲಿಮಿಟೆಡ್ ರವರುಗಳು ಸದರಿ ಟೆಂಡರ್‌ಗೆ, ತಾಂತ್ರಿಕವಾಗಿ ಅರ್ಹರಾಗಿರುತ್ತಾರೆ.

ಪ್ಯಾಕೇಜ್ 'ಡಿ' ಗೆ ಭಾಗವಹಸಿರುವ ಮೆ॥ ಪ್ರಕಾಶ್ ಆರ್ಟ್ಸ್ ಪ್ರೈ.ಲಿ ರವರನ್ನು RFP Document ನಲ್ಲಿನ ಷರತ್ತಿಗೆ ಅನ್ವಯವಾಗಿ Defaulter to BBMP ಆಗಿರುವ ಹಿನ್ನೆಲೆಯಲ್ಲಿ ತಾಂತ್ರಿಕ ಮೌಲ್ಯಮಾಪನದಲ್ಲಿ ಅನರ್ಹರಾಗಿದ್ದು, ಆರ್ಹರಾಗಿದ್ದು, ಸದರಿಯವರ ಬಿಡ್ ಅನ್ನು ಕಾನೂನು ಕೋಶದ ಅಭಿಪ್ರಾಯದಂತೆ ಸದರಯವರ ಬಿಡ್ ಅನ್ನು ಪರಿಗಣಿಸಲಾಗಿರುವುದಿಲ್ಲ.

ಅದರಂತೆ, ತಾಂತ್ರಿಕ ಮೌಲ್ಯಮಾಪನದಲ್ಲಿ ಅರ್ಹಗೊಂಡಿರುವ ಪ್ಯಾಕೇಜ್ – 'ಬಿ' ಮೆ॥ ಸೈನ್‌ಪೋಸ್ಟ್ ಇಂಡಿಯಾ ಪ್ರೈ.ಲಿ ರವರು ಹಾಗೂ ಪ್ಯಾಕೇಜ್ –'ಡಿ' ಮೆ॥ ಟೈಮ್ಸ್ ಇನೋವೇಟಿವ್ ಮೀಡಿಯಾ ಪ್ರೈವೇಟ್ ಲಿಮಿಟೆಡ್ ರವರುಗಳು ಆರ್ಥಿಕ ಮೌಲ್ಯಮಾಪನವನ್ನು ತೆರೆಯಲು ಅನುಮೋದನೆಯನ್ನು ಮುಖ್ಯ ಅಭಿಯಂತರರು (ರ.ಮೂ.ಸೌ) ರವರು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ನೀಡಲಾಗಿದ್ದು, ಆರ್ಥಿಕ

ಬಿಡ್ಡ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖೇನ ದಿನಾಂಕ: 25.05.2016 ರಂದು ತೆರೆಯಲಾಗಿರುತ್ತದೆ. ಸದರಿ ಏಜೆನ್ಸಿರವರುಗಳು ಆಯಾ ಪ್ಯಾಕೇಜ್‌ಗಳಿಗೆ ನಮೂದಿಸಿರುವ Highest Bidding Amount ವಿವರಗಳು ಈ ಕೆಳಕಂಡಂತೆಯಿರುತ್ತವೆ.

| ಕ್ರ ಸಂ | ಪ್ಯಾಕೇಜ್ | Minimum Bidding Amount Fixed per Bus Shelter / Per Annum | ಏಜೆನ್ಸಿ | Highest Bidding Amount quoted by Agency per Bus Shelter per Annum |
|---|---|---|---|---|
| 1 | ಪ್ಯಾಕೇಜ್ – 'ಬಿ' | ರೂ.40,000/– | ಮೆ॥ ಸೈನ್‌ಪೋಸ್ಟ್ ಇಂಡಿಯಾ ಪ್ರೈ.ಲಿ | ರೂ.45,000/– |
| 2 | ಪ್ಯಾಕೇಜ್ – 'ಡಿ' | ರೂ.40,000/– | ಮೆ॥ ಟೈಮ್ಸ್ ಇನೋವೇಟಿವ್ ಮೀಡಿಯಾ ಪ್ರೈ.ಲಿಮಿಟೆಡ್ | ರೂ.45,000/– |

ಸದರಿ ಟೆಂಡರ್‌ನ RFP Document ನ ಷರತ್ತಿನಲ್ಲಿ ಪ್ರತಿ ಬಸ್ ಶೆಲ್ಟರ್‌ಗೆ ಕನಿಷ್ಠ Annual Concession Fee ರೂ.40,000/– ಆಗಿದ್ದು ಮೇಲ್ಕಾಣಿಸಿದ ಏಜೆನ್ಸಿಗಳವರು ನಮೂದಿಸಿರುವ ಮೊತ್ತವು ಪ್ರತಿ ವರ್ಷಕ್ಕೆ ಪ್ರತಿ ಬಸ್ ಶೆಲ್ಟರ್‌ಗೆ ರೂ.45,000/– ಆಗಿರುತ್ತದೆ.

ಸದರಿ ಕಾಮಗಾರಿಯನ್ನು ಪಿ.ಪಿ.ಪಿ ಮಾದರಿಯಲ್ಲಿ ತೆಗೆದುಕೊಳ್ಳಬೇಕಾಗಿದ್ದು ಇದರಲ್ಲಿ ಪಾಲಿಕೆಯ ವತಿಯಿಂದ ಯಾವುದೇ ಆರ್ಥಿಕ ಹೊಣೆ ಇರುವುದಿಲ್ಲ. ಸದರಿ Infrastructure ಅನ್ನು ಸಾರ್ವಜನಿಕರು ಉತ್ತಮ ರೀತಿಯಲ್ಲಿ ಉಪಯೋಗಿಸಬಹುದಾಗಿರುತ್ತದೆ. ಸದರಿ ಏಜೆನ್ಸಿರವರು ಈ ಬಸ್ ತಂಗುದಾಣವನ್ನು ತಮ್ಮ ವೆಚ್ಚದಲ್ಲಿಯೇ
ಪಾಲಿಕೆಯ ಆರ್.ಎಫ್.ಪಿ. ಯಲ್ಲಿನ Specification and Condition ನಂತೆಯೇ ನಿರ್ಮಿಸಿ, 20 ವರ್ಷಗಳ ಅವಧಿಗೆ ನಿರ್ವಹಣೆ ಮಾಡುತ್ತಾರೆ. ಆದುದರಿಂದ, ಈ ಯೋಜನೆಯನ್ನು ಅರ್ಹರಾಗಿರುವ, ಸದರಿ ಏಜೆನ್ಸಿಗಳಾದ, ಪ್ಯಾಕೇಜ್ – 'ಬಿ' ಮೆ॥ ಸೈನ್‌ಪೋಸ್ಟ್ ಇಂಡಿಯಾ ಪ್ರೈ.ಲಿ ರವರು ಹಾಗೂ ಪ್ಯಾಕೇಜ್ 'ಡಿ' ಮೆ॥ ಟೈಮ್ಸ್ ಇನೋವೇಟಿವ್ ಮೀಡಿಯಾ ಪ್ರೈ.ಲಿ ರವರು ವಾರ್ಷಿಕವಾಗಿ ಪ್ರತಿ ಬಸ್ ಶೆಲ್ಟರ್‌ಗೆ ನಮೂದಿಸಿರುವ Highest Bidding Amount ರೂ. 45,000/– ಹಾಗೂ ಚಾಲ್ತಿಯಲ್ಲಿರುವ ಜಾಹೀರಾತಿನ ತೆರಿಗೆ ಅನ್ನು ವಾರ್ಷಿಕವಾಗಿ ಪಾಲಿಕೆಗೆ ಪಾವತಿಸಲು ಅನುಮೋದನೆ ಹಾಗೂ ಸದರಿ ಬಸ್ ತಂಗುದಾಣವನ್ನು ಡಿ.ಬಿ.ಓ.ಟಿ ಆಧಾರದ ಮೇಲೆ ನಿರ್ಮಾಣ ಮಾಡಿ 20 ವರ್ಷಗಳ ಅವಧಿಗೆ ನಿರ್ವಹಣೆ ಮಾಡಲು ಅನುಮೋದನೆಯನ್ನು ಕೋರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 01.07.2016ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/33/2016–17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 11.07.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮಾನ್ಯ ಶಾಸಕರು ಪದ್ಮನಾಭನಗರ ವಿಧಾನಸಭಾ ಕ್ಷೇತ್ರ ಇವರ ಕರ್ನಾಟಕ ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ Improvements to Lakshmanrao bouleward F Park in Karisandra ward No 166 ಕಾಮಗಾರಿಗಳ ಅಂದಾಜು ಮೊತ್ತ ರೂ.25.00 ಲಕ್ಷಗಳ ಅನುದಾನವನ್ನು ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರು ಅಧಿಕೃತ ಜ್ಞಾಪನ ಸಂಖ್ಯೆ ಕೆ.ಎಲ್.ಎಲ್.ಎ.ಡಿ.ಎಸ್(ಆರ್ಎ)/ಸಿಆರ್/10/2015–16/ದಿನಾಂಕ 11–3–2016 ರಲ್ಲಿ ಅನುದಾನ ಬಿಡುಗಡೆ

ಮಾಡಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಕಾರ್ಯಪಾಲಕ ಅಭಿಯಂತರರು (ಪದ್ಮನಾಮನಗರ) ರವರು ಶೇ 50% ಮೊತ್ತ ರೂ. 12.50 ಲಕ್ಷಗಳನ್ನು ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರು ಚೆಕ್ ಸಂಖ್ಯೆ 462872/ ದಿನಾಂಕ 30-3-2016ರಲ್ಲಿ ಅನುದಾನ ಬಿಡುಗಡೆಗೊಳಿಸಿರುವುದಾಗಿ ತಿಳಿಸಿರುತ್ತಾರೆ. ಸದರಿ ಕಾಮಗಾರಿಗಳನ್ನು ಲೆಕ್ಕಶೀರ್ಷಿಕೆ **ಶಾಸಕರ ಅನುದಾನ ಪಿ0583 ಅಡಿ ಜಾಬ್‌ಸಂಖ್ಯೆ ನೀಡಬೇಕಿದೆ. 2016-17ರ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-0583 ಅಡಿ ರೂ. 2.00 ಲಕ್ಷಗಳ ಅನುದಾನ ಮಾತ್ರ ಮೀಸಲಿರಿಸಿದೆ. ಪ್ರಸ್ತಾವನೆಯು ರೂ. 25.00 ಲಕ್ಷಗಳಾಗಿದ್ದು, ಆಯವ್ಯಯದಲ್ಲಿ** ಅನುದಾನದ ಕೊರತೆ ಇರುತ್ತದೆ. ಸರ್ಕಾರದ ಯೋಜನೆಯಡಿ ಅನುದಾನ ಬಿಡುಗಡೆಯಾಗಿರುವುದರಿಂದ ಮೊತ್ತ ರೂ.25.00 ಲಕ್ಷಗಳ ಅನುದಾನವನ್ನು ಪಿ-0583ನ ಚಾಲ್ತಿ ಕಾಮಗಾರಿಗಳ ಅಡಿ ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 11.07.2016ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/34/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 11.07.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮಾನ್ಯ ಶಾಸಕರು ಪದ್ಮನಾಭನಗರ ವಿಧಾನಸಭಾ ಕ್ಷೇತ್ರ ಇವರ ಕರ್ನಾಟಕ ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ Improvements works in C.A site Opposite Padmanabhanagara sub division on Padmanabhanagara ward in 182 ಕಾಮಗಾರಿಯ ಅಂದಾಜು ಮೊತ್ತ ರೂ. 25.00 ಲಕ್ಷಗಳ ಅನುದಾನವನ್ನು ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರು ಅಧಿಕೃತ ಜ್ಞಾಪನ ಸಂಖ್ಯೆ ಕೆ.ಎಲ್.ಎಲ್.ಎ.ಡಿ.ಎಸ್ (ಆರ್‌ಎ)/ಸಿಆರ್/09/2015-16/ದಿನಾಂಕ: 11-3-2016 ರಲ್ಲಿ ಅನುದಾನ ಬಿಡುಗಡೆ ಮಾಡಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಕಾರ್ಯಪಾಲಕ ಅಭಿಯಂತರರು (ಪದ್ಮನಾಮನಗರ) ರವರು ಶೇ 50% ಮೊತ್ತ ರೂ.12.50 ಲಕ್ಷಗಳನ್ನು ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರು ಚೆಕ್ ಸಂಖ್ಯೆ 468706/ ದಿನಾಂಕ: 18-4-2016ರಲ್ಲಿ ಅನುದಾನ ಬಿಡುಗಡೆಗೊಳಿಸಿರುವುದಾಗಿ ತಿಳಿಸಿರುತ್ತಾರೆ. ಸದರಿ ಕಾಮಗಾರಿಗಳನ್ನು ಲೆಕ್ಕಶೀರ್ಷಿಕೆ **ಶಾಸಕರ ಅನುದಾನ ಪಿ0583 ಅಡಿ ಜಾಬ್‌ಸಂಖ್ಯೆ ನೀಡಬೇಕಿದೆ. 2016-17ರ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-0583 ಅಡಿ ರೂ.2.00 ಲಕ್ಷಗಳ ಅನುದಾನ ಮಾತ್ರ ಮೀಸಲಿರಿಸಿದೆ. ಪ್ರಸ್ತಾವನೆಯು ರೂ. 25.00 ಲಕ್ಷಗಳಾಗಿದ್ದು, ಆಯವ್ಯಯದಲ್ಲಿ** ಅನುದಾನದ ಕೊರತೆ ಇರುತ್ತದೆ. ಸರ್ಕಾರದ ಯೋಜನೆಯಡಿ ಅನುದಾನ ಬಿಡುಗಡೆಯಾಗಿರುವುದರಿಂದ ಮೊತ್ತ ರೂ.25.00 ಲಕ್ಷಗಳ ಅನುದಾನವನ್ನು ಪಿ-0583ನ ಚಾಲ್ತಿ ಕಾಮಗಾರಿಗಳ ಅಡಿ ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 11.07.2016ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/35/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 11.07.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮಾನ್ಯ ಶಾಸಕರು ಪದ್ಮನಾಭನಗರ ವಿಧಾನಸಭಾ ಕ್ಷೇತ್ರ ಇವರ ಕರ್ನಾಟಕ ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ Providing out door gym quipments at Brundavaa park in

Ganesh mandira in Ward No. 165 & Providing children equipments vishweshwaraian park in Ward No. 165 ರ 2 ಕಾಮಗಾರಿಗಳ ಅಂದಾಜು ಮೊತ್ತ ರೂ.27.00 ಲಕ್ಷಗಳ ಅನುದಾನವನ್ನು ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರು ಅಧಿಕೃತ ಜ್ಞಾಪನ ಸಂಖ್ಯೆ ಕೆ.ಎಲ್.ಎಲ್.ಎ.ಡಿ.ಎಸ್ (ಆರ್ಎ)/ಸಿಆರ್/08/2015–16/ದಿನಾಂಕ 18–01–2016 ರಲ್ಲಿ ಅನುದಾನ ಬಿಡುಗಡೆ ಮಾಡಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಕಾರ್ಯಪಾಲಕ ಅಭಿಯಂತರರು (ಪದ್ಮನಾಮನಗರ) ರವರು ಶೇ 50% ಮೊತ್ತ ರೂ. 13.50 ಲಕ್ಷಗಳನ್ನು ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರು ಚೆಕ್ ಸಂಖ್ಯೆ 468705/ ದಿನಾಂಕ 18–4–2016ರಲ್ಲಿ ಅನುದಾನ ಬಿಡುಗಡೆಗೊಳಿಸಿರುವುದಾಗಿ ತಿಳಿಸಿರುತ್ತಾರೆ. ಸದರಿ ಕಾಮಗಾರಿಗಳನ್ನು ಲೆಕ್ಕಶೀರ್ಷಿಕೆ **ಶಾಸಕರ ಅನುದಾನ ಪಿ0583 ಅಡಿ ಜಾಬ್‌ಸಂಖ್ಯೆ ನೀಡಬೇಕಿದೆ. 2016–17ರ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–0583 ಅಡಿ ರೂ.2.00 ಲಕ್ಷಗಳ ಅನುದಾನ ಮಾತ್ರ ಮೀಸಲಿರಿಸಿದೆ. ಪ್ರಸ್ತಾವನೆಯು ರೂ.27.00 ಲಕ್ಷಗಳಾಗಿದ್ದು, ಆಯವ್ಯಯದಲ್ಲಿ** ಅನುದಾನದ ಕೊರತೆ ಇರುತ್ತದೆ. ಸರ್ಕಾರದ ಯೋಜನೆಯಡಿ ಅನುದಾನ ಬಿಡುಗಡೆಯಾಗಿರುವುದರಿಂದ ಮೊತ್ತ ರೂ. 27.00 ಲಕ್ಷಗಳ ಅನುದಾನವನ್ನು ಪಿ–0583ನ ಚಾಲ್ತಿ ಕಾಮಗಾರಿಗಳ ಅಡಿ ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 11.07.2016ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *ಹೆಚ್ಚುವರಿ ವಿಷಯಗಳು:–*

### *ವಿಷಯದ ಸಂಖ್ಯೆ: ತೆಆಸ್ಥಾಸ/37/2016–17*

ಆಯುಕ್ತರ ದಿನಾಂಕ: 20.07.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಗುತ್ತಿಗೆದಾರರು ನಿರ್ವಹಿಸಿರುವ ಕಾಮಗಾರಿ ಬಿಲ್ಲುಗಳನ್ನು ಅನಾರೋಗ್ಯ ಹಾಗೂ ವಿವಾಹದ ವಿಶೇಷ ಪ್ರಕರಣಗಳಡಿಯಲ್ಲಿ ಸಾಮಾನ್ಯ ಜೇಷ್ಠತೆಯನ್ನು ಹೊರತುಪಡಿಸಿ, ಬಿಲ್ಲನ್ನು ಮಾನ್ಯ ಮಾಡಿ ಪಾವತಿಸುವ ಬಗ್ಗೆ ಸರ್ಕಾರದ Un-Official Note: PWD/260/SO/FC/2000(P), Dtd: 25-09-2001 ಆದೇಶದಲ್ಲಿ "ಶೇ.80ರಷ್ಟು ಹಣವನ್ನು ಕಡ್ಡಾಯವಾಗಿ ಜೇಷ್ಠತೆ ಮೂಲಕ ಬಾಕಿ ಬಿಲ್ಲುಗಳನ್ನು ಪಾವತಿಸಲು ಹಾಗೂ ಶೇ.20ರಷ್ಟು ಹಣವನ್ನು ಕಾಲಮಿತಿಯಲ್ಲಿ ನಿರ್ವಹಿಸುವ ತುರ್ತು ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸಲು ಉಪಯೋಗಿಸುವುದು" ಎಂದು ಆದೇಶವಿರುತ್ತದೆ. ಹಾಗೂ ಘನ ನ್ಯಾಯಾಲಯದ ರಿಟ್‌ಪಿಟಿಷನ್ ಸಂ: 6883 of 2015 (GM-TEN), Dtd: 17-04-2015ರಂತೆ ಘನ ನ್ಯಾಯಾಲಯವು ಸರ್ಕಾರದ ಆದೇಶದ ಪ್ರಕಾರ ಕ್ರಮವಹಿಸಲು ಆದೇಶಿಸಿದೆ.

ಸರ್ಕಾರ ಮತ್ತು ಘನ ನ್ಯಾಯಾಲಯದ ಆದೇಶದಂತೆ ಮಹಾನಗರ ಪಾಲಿಕೆಯು ಜೇಷ್ಠತೆಯ ಮೇರೆಗೆ ಬಿಲ್ಲುಗಳನ್ನು ಪಾವತಿ ಮಾಡಲಾಗುತ್ತಿದ್ದು, ಶೇ.20ರಷ್ಟು ಹಣವನ್ನು ಕಾಲಮಿತಿಯಲ್ಲಿ ನಿರ್ವಹಿಸುವ ತುರ್ತು ಕಾಮಗಾರಿಗಳಾದ ಬೃಹತ್ ಯೋಜನೆ ಕಾಮಗಾರಿಗಳು (ಟೆಂಡರ್ ಮೊತ್ತ ರೂ.200.00 ಲಕ್ಷ ಮೇಲ್ಪಟ್ಟ ಮುಂದುವರೆದ/ಚಾಲ್ತಿ ಕಾಮಗಾರಿಗಳು), ಠೇವಣಿ ಮೂಲಕ ವಂತಿಗೆಯನ್ನು ಸ್ವೀಕರಿಸಿ ನಿರ್ವಹಿಸಿದ (Deposit Contribution) ಕಾಮಗಾರಿಗಳು, ಕಾಮಗಾರಿಗಳಿಗೆ Mobilisation Advance ನೀಡುವುದು, ನ್ಯಾಯಾಲಯದ ಪ್ರಕರಣಗಳಿಗೆ ಸಂಬಂಧಿಸಿದ ಪಾವತಿಗಳು, ಭೂಸ್ವಾಧೀನ ಪರಿಹಾರದ ಬಿಲ್‌ಗಳು, ಕಲ್ಯಾಣ ಕಾರ್ಯಕ್ರಮ(24.10%) ಅಡಿಯಲ್ಲಿ ನಿರ್ವಹಿಸಿದ ಕಾಮಗಾರಿಗಳು, ಘನತ್ಯಾಜ್ಯ ಘಟಕಗಳ ಮತ್ತು ಸುತ್ತಮುತ್ತಲಿನ ಹಳ್ಳಿಗಳ ಅಭಿವೃದ್ಧಿ ಮತ್ತು ನಿರ್ವಹಣಾ ಕಾಮಗಾರಿಗಳು, SWDಗೆ ಸಂಬಂಧಿಸಿದಂತೆ ತುರ್ತು ಕಾಮಗಾರಿಗಳು, ರಾಜಕಾಲುವೆಗಳಲ್ಲಿ Desilting ಮತ್ತು ನಿರ್ವಹಣೆ, ಉದ್ಯಾನವನಗಳ ಅಭಿವೃದ್ಧಿ ಮತ್ತು

ನಿರ್ವಹಣೆ ಕಾಮಗಾರಿಗಳು, ಪಾಲಿಕೆಯ ಕಟ್ಟಡಗಳ ನಿರ್ಮಾಣ ಕಾಮಗಾರಿ ಮತ್ತು ನಿರ್ವಹಣೆ ಕಾಮಗಾರಿಗಳು, ಬೀದಿ ದೀಪಗಳ ಅಳವಡಿಕೆ ಮತ್ತು ನಿರ್ವಹಣೆ, ಕುಡಿಯುವ ನೀರಿಗೆ ಸಂಬಂಧಿಸಿದ ಕಾಮಗಾರಿಗಳು, ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿಗಳು, ರಸ್ತೆ ಗುಂಡಿ ಮುಚ್ಚುವುದು, ಸಿಲ್ಟ್ & ಟ್ರ್ಯಾಕ್ಟರ್ ಕಾಮಗಾರಿ ನಿರ್ವಹಣೆ, ಅರಣ್ಯೀಕರಣ ಮತ್ತು ನಿರ್ವಹಣೆ, ಕೆರೆಗಳ ನಿರ್ವಹಣೆ, ಚಿತಾಗಾರ ನಿರ್ವಹಣೆ ಕಾಮಗಾರಿಗಳು Priority Categoryಯಲ್ಲಿ ಪಾವತಿಸಲಾಗುತ್ತಿದೆ.

ಈ ಮಧ್ಯದಲ್ಲಿ ಗುತ್ತಿಗೆದಾರರು ನಿರ್ವಹಿಸಿರುವ ಕಾಮಗಾರಿ ಬಿಲ್ಲುಗಳನ್ನು ಅನಾರೋಗ್ಯ ಹಾಗೂ ವಿವಾಹದ ವಿಶೇಷ ಪ್ರಕರಣಗಳಡಿಯಲ್ಲಿ ಸಾಮಾನ್ಯ ಜೇಷ್ಟತೆಯನ್ನು ಹೊರತುಪಡಿಸಿ, ಬಿಲ್ಲನ್ನು ಮಾನ್ಯ ಮಾಡಿ ಪಾವತಿಗೆ ಶ್ರೀ ರಾಜಶೇಖರ ರೆಡ್ಡಿ ರವರು ನಿರ್ವಹಿಸಿರುವ ಕಾಮಗಾರಿಯ ಬಿಲ್ ಮೊತ್ತ ರೂ.1,63,00,059/– ಮತ್ತು ಕೆ.ನಾರಾಯಣಗೌಡ ಇವರು ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮೂಲಕ ಕಾಮಗಾರಿಯನ್ನು ನಿರ್ವಹಿಸಿರುವ ಬಿಲ್‌ನ ಮೊತ್ತ ರೂ.74,25,000/–ಗಳಿಗೆ ಕೋರಿಕೆಗಳನ್ನು ಸಲ್ಲಿಸಿರುತ್ತಾರೆ.

ಸದರಿ ಬಿಲ್ಲುಗಳನ್ನು ವಿಶೇಷ ಪ್ರಕರಣಗಳೆಂದು ಪರಿಗಣಿಸಿ, ಹಣ ಪಾವತಿಸುವ ಬಗ್ಗೆ ಕಾನೂನು ಕೋಶದ ಅಭಿಪ್ರಾಯವನ್ನು ಕೋರಲಾಗಿತ್ತು. ಅದರಂತೆ ಕಾನೂನು ಕೋಶದ ಮುಖ್ಯಸ್ಥರು "ಯಾವುದು appropriate cases ಎಂಬುದರ ಬಗ್ಗೆ ಒಂದು ಪಟ್ಟಿಯನ್ನು ತಯಾರಿಸಿ, ಅವುಗಳಲ್ಲಿ ಜೇಷ್ಠತೆಯ ಆಧಾರ ಮೇಲೆ ಕೆಲವೊಂದು ಪ್ರಕರಣಗಳಲ್ಲಿ ಹಣ ಬಿಡುಗಡೆ ಮಾಡಬಹುದಾಗಿದ್ದು, ವೈದ್ಯಕೀಯ ಆಧಾರದ ಮೇಲೆ ಬಿಲ್ಲನ್ನು ಪಾವತಿ ಮಾಡಲು ಕೋರುವ ಸಂದರ್ಭದಲ್ಲಿ ಅಂತಹ ಹಣವನ್ನು ನೇರವಾಗಿ ಆಸ್ಪತ್ರೆಗೆ ಸಂದಾಯಿಸಲು ಕ್ರಮವಹಿಸಬಹುದು. ವೈದ್ಯಕೀಯ ಬಿಲ್ಲು ಹೊರತಾಗಿ ರೂ.10,00,000/–ಗಳವರೆಗೆ ನೀಡುವ ಕುರಿತು ತೀರ್ಮಾನಿಸಬಹುದು. ಇಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ತೀರ್ಮಾನಿಸುವ ಬಗ್ಗೆ ಒಂದು ಸಮಿತಿಯನ್ನು ರಚಿಸಬಹುದಾಗಿರುತ್ತದೆ ಹಾಗೂ ಘನ ಉಚ್ಚನ್ಯಾಯಾಲಯದ ಆದೇಶವನ್ನು ಪರಿಶೀಲಿಸಿಕೊಂಡು, ನಿಯಮಾನುಸಾರ ಬಿಲ್ಲನ್ನು ಚುಕ್ತಗೊಳಿಸುವ/ ಭರಿಸುವ ಬಗ್ಗೆ ಮುಂದಿನ ಕ್ರಮ ಜರುಗಿಸಬಹುದಾಗಿ ಅಭಿಪ್ರಾಯಿಸಿರುತ್ತಾರೆ".

ಘನ ನ್ಯಾಯಾಲಯದ ರಿಟ್‌ಪಿಟಿಷನ್ ಸಂ: 6883 of 2015 (GM-TEN), Dtd: 17-04-2015ರಂತೆ ಆದೇಶದಲ್ಲಿ "The Government order at Annexure-B dated 25-09-2001 indicates guidelines for clearance of the bills on the basis of the seniority. I am of the view that it is just and proper for the BBMP to follow the guidelines while clearing the bills as it stream lines the system of release and utilization of letter of credit. However, in appropriate cases, deviation in clearing the bills may be made by assigning cogent reasons" ಆದೇಶವಾಗಿರುತ್ತದೆ.

ಪ್ರಸ್ತುತ ಮಾನ್ಯ ಆಯುಕ್ತರ ಕಛೇರಿ ಆದೇಶ ಸಂ:ಮುಲೆಅ/ಪಿಆರ್/4415/15–16, ದಿನಾಂಕ:05–05–2016 ರಂತೆ ಜೇಷ್ಟತೆಯನ್ನು ಹೊರತುಪಡಿಸಿ, Priority Categoryಯಲ್ಲಿ ಹೇಳಿರುವ ಕಾಮಗಾರಿಗಳೊಂದಿಗೆ ವಿವಾಹ, ಅನಾರೋಗ್ಯ, ಇತ್ಯಾದಿ ಬಿಲ್ಲುಗಳನ್ನು ಮಾನ್ಯ ಮಾಡುವ ಬಗ್ಗೆ ಮತ್ತು ಇಂತಹ ಪ್ರಕರಣಗಳಿಗೆ ಎಷ್ಟು ಮೊತ್ತದವರೆಗೆ ಪಾವತಿ ಮಾಡಬಹುದಾಗಿದೆ ಎಂಬುದರ ಬಗ್ಗೆ ಘನ ಉಚ್ಚ ನ್ಯಾಯಾಲಯದ ತೀರ್ಮಾನದ ಪ್ರಕಾರ ಕ್ರಮ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿ ಮಂಡಿಸಲಾಗಿದೆ.

**ನಿರ್ಣಯ: ಮಾನ್ಯ ಆಯುಕ್ತರ ಟಿಪ್ಪಣಿ ದಿನಾಂಕ: 20.07.2016ಕ್ಕೆ ಸಂಬಂಧಿಸಿದಂತೆ ಸರ್ಕಾರದ ಆದೇಶದ ಸಂಖ್ಯೆ ನಅಇ/575/ಎಂಎನ್‌ವೈ2015, ದಿ.29.08.2015 ರಂತೆ ಮುಂದಿನ ಕ್ರಮಕ್ಕಾಗಿ ಕೌನ್ಸಿಲ್ ಹಾಗೂ ಸರ್ಕಾರದ ತೀರ್ಮಾನಕ್ಕೆ ಸಲ್ಲಿಸಲು ಸಮಿತಿಯು ತೀರ್ಮಾನಿಸಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/38/2016-17***

ವಿಶೇಷ ಆಯುಕ್ತರು (ಆಸ್ತಿಗಳು) ರವರ ದಿನಾಂಕ: 08.07.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ: 154, ಬಸವನಗುಡಿ 1ನೇ ಮುಖ್ಯರಸ್ತೆ, ಎನ್.ಆರ್.ಕಾಲೋನಿ, ಅಂಗಡಿ ಬೀದಿ ಮಧ್ಯೆ ಇರುವ 130x60 ಅಡಿಗಳ ಸ್ವತ್ತನ್ನು ದೇಶಿಯ ವ್ಯಾಯಾಮ ಶಾಲೆ ರವರಿಗೆ ದಿನಾಂಕ: 01-02-1951 ರಂದು ಮಾಸಿಕ ರೂ.240/- ಗಳಂತೆ ನಿಗಧಿಪಡಿಸಿ 40 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿರುತ್ತದೆ. ನಂತರ, ದಿನಾಂಕ:10-02-1991 ರಿಂದ 30 ವರ್ಷಗಳ ಅವಧಿಗೆ ಗುತ್ತಿಗೆಯನ್ನು ನವೀಕರಿಸಲಾಗಿದ್ದು, ಸದರಿ ಗುತ್ತಿಗೆ ಅವಧಿ ಚಾಲ್ತಿಯಲ್ಲಿದ್ದು, ದಿ:09-02-2021ಕ್ಕೆ ಮುಕ್ತಾಯಗೊಳ್ಳಲಿದೆ.

ಸದರಿ ಸ್ಥಳವನ್ನು ಸಾರ್ವಜನಿಕರ ಉದ್ದೇಶಕ್ಕಾಗಿ ಬಸ್-ಬೇ ನಿರ್ಮಿಸಲು ಜಾಗವನ್ನು ಬಿಟ್ಟುಕೊಡುವಂತೆ ಗುತ್ತಿಗೆದಾರರನ್ನು ಕೋರಿದ್ದರ ಮೇರೆಗೆ ಗುತ್ತಿಗೆದಾರರು ಬಸ್-ಬೇ ಮೇಲಿನ 2ನೇ ಅಂತಸ್ತಿನಲ್ಲಿ ವ್ಯಾಯಾಮ ಶಾಲೆ ನಡೆಸಲು 3000 ಚದರಡಿಗಳ ಕಟ್ಟಡವನ್ನು ಬಿಟ್ಟುಕೊಡುವಂತೆ ಕೋರಿ ಅದರಂತೆ ಗುತ್ತಿಗೆದಾರರು ಜಾಗವನ್ನು ಬಿಟ್ಟುಕೊಟ್ಟಿರುತ್ತಾರೆ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ದಿನಾಂಕ:14-02-2013ರ ಪತ್ರದಲ್ಲಿ ವಾರ್ಡ್ 154ರ ಬಸವನಗುಡಿ 1ನೇ ಮುಖ್ಯರಸ್ತೆಯ ಎನ್.ಆರ್.ಕಾಲೋನಿ, ಅಂಗಡಿ ಬೀದಿ ಮಧ್ಯೆ ಇರುವ 130x60 ಅಡಿಗಳ ಸ್ವತ್ತಿನಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಜಾಗವನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಹಸ್ತಾಂತರಿಸುವಂತೆ ಕೋರಿರುವ ಮೇರೆಗೆ ಪಾಲಿಕೆಯ ಕೌನ್ಸಿಲ್ ಸಭೆಯ ದಿ:30-12-2013ರ ಸಭೆಯ ವಿಷಯದ ಸಂಖ್ಯೆ:163/2013-14ರಲ್ಲಿ ಈ ಕೆಳಕಂಡ ನಿರ್ಣಯವನ್ನು ಕೈಗೊಂಡಿರುತ್ತದೆ.

1. ಸರ್ಕಾರಿ ಸ್ವಾಮ್ಯದ ಇಲಾಖೆಗಳಿಗೆ ಜಮೀನು ವಿಲೇವಾರಿ ಮಾಡುವ ಬಗ್ಗೆ ಕೆ.ಎಂ.ಸಿ ಕಾಯ್ದೆ 1976 ರನ್ವಯ ಸರ್ಕಾರದ ಆದೇಶ ಸಂಖ್ಯೆ:ನಆಇ 129 ಟಿಎಂಡಿ 2002, ಬೆಂಗಳೂರು, ದಿನಾಂಕ: 02-06-2003 ರಂತೆ ನಿವೇಶನದ ಮಾರುಕಟ್ಟೆ ದರದ ಶೇಕಡ 50% ರಂತೆ ದರ ನಿಗಧಿಗೊಳಿಸಿ ಜಮೀನು ವಿಲೇವಾಗಿ ಮಾಡಬಹುದಾಗಿರುತ್ತದೆ.

2. ಅದರಂತೆ, ಪ್ರಸ್ತುತ ಈ ನಿವೇಶನದ ಮಾರುಕಟ್ಟೆ ದರವು ಚದರ ಅಡಿಯೊಂದಕ್ಕೆ ರೂ.4500/-ಗಳಾಗಿದ್ದು, ಅದರಂತೆ ಒಟ್ಟು 7800 ಚದರ ಅಡಿಗಳ ನಿವೇಶನದ ಮಾರುಕಟ್ಟೆ ದರವು ರೂ.3,51,00,000/-ಗಳಾಗುತ್ತದೆ. ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿಎಂಡಿ 2002, ಬೆಂಗಳೂರು, ದಿನಾಂಕ:02-06-2003 ರಂತೆ ಈ ನಿವೇಶನದ ಮಾರುಕಟ್ಟೆ ದರದ ಶೇಕಡ 50% ರಂತೆ ನಿವೇಶನ ಮೌಲ್ಯವು ರೂ.1,75,50,000/-ಗಳಾಗುತ್ತದೆ.

3. ಪ್ರಸ್ತುತ ಮಾರುಕಟ್ಟೆ ದರದ ಶೇ.50% ದರದಂತೆ ರೂ.1,75,50,000/-ಗಳ ಮೊತ್ತವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಪಡೆದು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ನಿವೇಶನವನ್ನು ವಿಲೇವಾಗಿ ಮಾಡುವುದು.

4. ಸದರಿ ನಿವೇಶನದಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ನೆಲ ಮಹಡಿ ಒಳಗೊಂಡು 1581 ಚದರ ಮೀಟರ್ ವಿಸ್ತೀರ್ಣದ 3 ಮಹಡಿಗಳ ಕಟ್ಟಡವನ್ನು ತನ್ನ ವೆಚ್ಚದಲ್ಲಿ ನಿರ್ಮಿಸುವುದು.

5. ಈ ನಿವೇಶನದಲ್ಲಿ ನಿರ್ಮಿಸಲಿರುವ 3 ಮಹಡಿಗಳ ಕಟ್ಟಡದಲ್ಲಿ ನೆಲ ಮಹಡಿಯನ್ನು ಬಸ್ ನಿಲ್ದಾಣಕ್ಕಾಗಿ ಮತ್ತು 1ನೇ ಮಹಡಿಯನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣ ಮತ್ತು ಇತರೆ ವಿವಿಧ ಉದ್ದೇಶಕ್ಕೆ ಬಳಸಿಕೊಳ್ಳುವುದು.
6. 2ನೇ ಮಹಡಿಯಲ್ಲಿನ 3658 ಚದರ ಮೀಟರ್ ವಿಸ್ತೀರ್ಣದ ಕಟ್ಟಡವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸುವುದು.
7. ಅದರಂತೆ ಕಟ್ಟಡದ 1/3 ಭಾಗ ಮತ್ತು ನಿವೇಶನದ 1/3 ಭಾಗದ ಹಕ್ಕನ್ನು ಪಾಲಿಕೆಯು ಪಡೆಯುವುದು.
8. ಹೀಗಾಗಿ, ಈ ನಿವೇಶನದಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ನಿರ್ಮಿಸಲಿರುವ ಒಟ್ಟು 1581 ಚದರ ಮೀಟರ್ ವಿಸ್ತೀರ್ಣದ ಕಟ್ಟಡಕ್ಕೆ ತಗುಲಲಿರುವ ಅಂದಾಜು ಒಟ್ಟು ವೆಚ್ಚ ರೂ.2,97,70,230/–ಗಳಲ್ಲಿ 2 ಮಹಡಿಯಲ್ಲಿ ಪಾಲಿಕೆಗೆ ಹಸ್ತಾಂತರಿಸುವ 434 ಚದರ ಮೀಟರ್ ವಿಸ್ತೀರ್ಣದ ಕಟ್ಟಡ (1/3 ಭಾಗ) ನಿರ್ಮಾಣಕ್ಕೆ ತಗುಲಲಿರುವ ಅಂದಾಜು ವೆಚ್ಚ ರೂ.81,72,220/– ಮತ್ತು ನಿವೇಶನದ 1/3 ಭಾಗದ ಹಕ್ಕಿಗಾಗಿ ನಿವೇಶನದ ಮೌಲ್ಯ ರೂ.57,91,500/–ಗಳು ಸೇರಿ ಒಟ್ಟು ರೂ.1,39,63,720/–ಗಳನ್ನು ನಿವೇಶನದ ವಿಲೇವಾರಿ ಮೌಲ್ಯ ರೂ.1,75,50,000/–ಕ್ಕೆ ಹೊಂದಾಣಿಕೆ ಮಾಡಿಕೊಂಡು ಬಾಕಿ ಮೊತ್ತ ರೂ.35,86,280/–ಗಳನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ ಪಡೆದು ನಿವೇಶನವನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಪ್ರಯಾಣಿಕರ ಅನುಕೂಲಕ್ಕಾಗಿ ಬಸ್ ನಿಲ್ದಾಣ ಮತ್ತಿತರ ಉದ್ದೇಶಕ್ಕೆ ನೀಡುವುದು.
9. ಈ ನಿವೇಶನದ 1/3 ಭಾಗದ ಹಕ್ಕನ್ನು ಪಾಲಿಕೆಯು ಉಳಿಸಿಕೊಳ್ಳುವುದು ಮತ್ತು 2/3 ಭಾಗದ ಹಕ್ಕನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ನೀಡುವುದು. ಎಂಬುವುದಾಗಿ ಸರ್ಕಾರದಲ್ಲಿ ಅನುಮೋದನೆಗೊಂಡಿರುತ್ತದೆ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಸದರಿ ಜಾಗದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಕಟ್ಟಡದಲ್ಲಿ ಮೂರು ಮಹಡಿಗಳ ಕಟ್ಟಡವನ್ನು ನಿರ್ಮಿಸಿ, ನೆಲ ಮಹಡಿಯ ಪ್ರದೇಶವನ್ನು ಬಸ್ ನಿಲ್ದಾಣವಾಗಿ, ಒಂದನೇ ಮಹಡಿ ಪ್ರದೇಶವನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವಾಣಿಜ್ಯ ಸಂಕೀರ್ಣ ಮತ್ತು ಇತರೆ ಉದ್ದೇಶಕ್ಕೆ ಉಪಯೋಗಿಸಿಕೊಳ್ಳಲು ಹಾಗೂ ಎರಡನೇ ಮಹಡಿ ಪ್ರದೇಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಉಭಯತ್ರು ಕೂಡಿ ನಿಗಧಿಪಡಿಸಿದ ದರಕ್ಕೆ ಗುತ್ತಿಗೆಗೆ ದೇಶಿಯಾ ವ್ಯಾಯಮ ಶಾಲೆ ರವರಿಗೆ ನೀಡಲು ಸರ್ಕಾರದ ಆದೇಶವಾಗಿರುತ್ತದೆ.

ಮೇಲೆ ತಿಳಿಸಿರುವ ಸರ್ಕಾರದ ಅನುಮೋದನೆ ಕಂಡಿಕೆ 2ರಂತೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯವರು ನಿರ್ಮಿಸಿರುವ 2ನೇ ಮಹಡಿಯ ಪ್ರದೇಶವನ್ನು ಹಿಂದಿನ ಗುತ್ತಿಗೆದಾರರಾದ ದೇಶಿಯ ವ್ಯಾಯಮ ಶಾಲೆ ರವರಿಗೆ ಗುತ್ತಿಗೆಗೆ ನೀಡುವ ಸಂಬಂದ ಉಭಯತ್ರರು (ಬಿ.ಎಂ.ಟಿ.ಸಿ ಮತ್ತು ಬಿ.ಬಿ.ಎಂ.ಪಿ) ರವರು ಕೂಡಿ ನಿಗಧಿಪಡಿಸಿದ ದರಕ್ಕೆ ಗುತ್ತಿಗೆ ನೀಡಲು ಆದೇಶಿಸಿರುವುದರಿಂದ ದರವನ್ನು ನಿಗಧಿಪಡಿಸಿರುತ್ತಾರೆ. ಸರ್ಕಾರಿ ಆದೇಶದ ಸಂಖ್ಯೆ:ನಆಇ 104 ಎಂಎನ್‌ಜಿ 2013, ಬೆಂಗಳೂರು, ದಿನಾಂಕ 13.10.2014ರ ಆದೇಶದ ಕ್ರಮಸಂಖ್ಯೆ 2ರಂತೆ ಆದೇಶಿಸಿರುವಂತೆ ಎರಡನೇ ಮಹಡಿ ಪ್ರದೇಶವನ್ನು ದೇಶಿಯ ವ್ಯಾಯಮ ಶಾಲೆಗೆ ಗುತ್ತಿಗೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಉಭಯತ್ರರು ಕೂಡಿ ನಿಗಧಿಪಡಿಸಲು ಆದೇಶಿಸಿರುವ ಮೇರೆಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಬಸವನಗುಡಿ) ರವರು ದರ ವಿಸ್ತೀರ್ಣ ಪ್ರತಿ ಚದರಡಿ ರೂ.96/– ರಂತೆ ಪ್ರತಿ ತಿಂಗಳಿಗೆ ರೂ.4,45,875/–ಗಳನ್ನು ನಿಗಧಿಪಡಿಸಿದೆ.

**ಹಾಲಿ ವರದಿ:-**

| ಸರ್ಕಾರದ ಆದೇಶ | ಜಂಟಿ ಆಯುಕ್ತರ ವರದಿ |
|---|---|
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ವಾರ್ಡ್ ಸಂಖ್ಯೆ:154ರ ಬಸವನಗುಡಿ ಒಂದನೇ ಮುಖ್ಯರಸ್ತೆಯ ಎನ್.ಆರ್.ಕಾಲೋನಿ, ಅಂಗಡಿ ಬೀದಿ ಮಧ್ಯೆ ದೇಶಿಯ ವ್ಯಾಯಾಮ ಶಾಲೆಯವರಿಗೆ ಗುತ್ತಿಗೆಗೆ ನೀಡಿದ್ದ ಸ್ವತ್ತನ್ನು ಹಿಂಪಡೆದು ಸದರಿ ಸ್ವತ್ತನ್ನು ಶೇ 50%ರ ಮಾರುಕಟ್ಟೆ ದರದಲ್ಲಿ ಅಂದರೆ, ರೂ.1,75,50,000/- (ಒಂದು ಕೋಟಿ ಎಪ್ಪತ್ತೈದು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಗಳಿಗೆ ಸರ್ಕಾರಿ ಸ್ವಾಮ್ಯದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಮಾರಾಟ ಮಾಡಲು. | ಸದರಿ ಸ್ವತ್ತನ್ನು ಶೇ 50%ರ ಮಾರುಕಟ್ಟೆ ದರದಲ್ಲಿ ಅಂದರೆ, ರೂ.1,75,50,000/- (ಒಂದು ಕೋಟಿ ಎಪ್ಪತ್ತೈದು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಗಳಿಗೆ ಸರ್ಕಾರಿ ಸ್ವಾಮ್ಯದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಮಾರಾಟ ಮಾಡಲು ಸರ್ಕಾರದ ಆದೇಶವಾಗಿದ್ದು, ಹಾಲಿ ಕಂಡಿಕೆ (83) ರಲ್ಲಿ ಉಪ ಆಯುಕ್ತರು ಮತ್ತು ಜಂಟಿ ಆಯುಕ್ತರು (ದಕ್ಷಿಣ) ರವರು ವ್ಯವಸ್ಥಾಪಕ ನಿರ್ದೇಶಕರು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ರವರ ಅರೆ ಸರ್ಕಾರಿ ಪತ್ರದ ಸಂಖ್ಯೆ: ಬೆಂಮಸಾಸಂ/ಕೇಂಕ/ಸಂ/ವಾಣಿಜ್ಯ/ಆಸ್ತಿ/367/ 1127/2016-17, ದಿ:27-06-2016ರ ಪತ್ರದಲ್ಲಿ ಮಹಾನಗರ ಸಾರಿಗೆ ಸಂಸ್ಥೆಯ ವತಿಯಿಂದ ಕೈಗೊಳ್ಳಲಾದ ಕಾಮಗಾರಿಯು ಅಂತಿಮ ಹಂತದಲ್ಲಿದ್ದು, ಇದಕ್ಕಾಗಿ 3.5 ಕೋಟಿ ವೆಚ್ಚ ಮಾಡಲಾಗಿರುತ್ತದೆ. ಸದರಿ ನಿವೇಶನದ 2ನೇ ಮಹಡಿಯನ್ನು ಪಾಲಿಕೆಗೆ ನೀಡಬೇಕಾಗಿರುವ ಹಿನ್ನೆಲೆಯಲ್ಲಿ ಸದ್ಯದ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿಲ್ಲದ ಕಾರಣ ಸದರಿ ನಿವೇಶನವನ್ನು ಖರೀದಿಸಲು ಕಷ್ಟಕರವಾಗಿರುವುದರಿಂದ ಸಂಸ್ಥೆಗೆ ಉಚಿತವಾಗಿ ಸದರಿ ನಿವೇಶನವನ್ನು ಒದಗಿಸುವ ಸಂಬಂಧ ಪಾಲಿಕೆಯ ಸಭೆಯು ಒಪ್ಪಿಗೆ ಪಡೆದು ಸರ್ಕಾರದ ಆದೇಶಕ್ಕಾಗಿ ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಿಕೊಡಲು ಕೋರಿರುತ್ತಾರೆ ಎಂದು ವರದಿಸಿ ಈ ಬಗ್ಗೆ ಪಾಲಿಕೆಯ ಸಭೆಯ ಮುಂದೆ ತೀರ್ಮಾನಕ್ಕಾಗಿ ಪ್ರಸ್ತಾವನೆ ಮಂಡಿಸಲಾಗಿರುತ್ತದೆ ಎಂದು ಸಲ್ಲಿಸಿರುತ್ತಾರೆ. |
| ಸದರಿ ನಿವೇಶನದಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ತನ್ನ ವೆಚ್ಚದಲ್ಲಿ ಮೂರು ಮಹಡಿಗಳ ಕಟ್ಟಡವನ್ನು ನಿರ್ಮಿಸಿ, ಕೆಳ ಅಂತಸ್ತಿನಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಿ, ನೆಲ ಮಹಡಿಯ ಪ್ರದೇಶವನ್ನು ಬಸ್ ನಿಲ್ದಾಣವಾಗಿ, ಒಂದನೇ ಮಹಡಿ ಪ್ರದೇಶವನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ವಾಣಿಜ್ಯ ಮತ್ತು ಇತರೆ ಉದ್ದೇಶಕ್ಕೆ ಉಪಯೋಗಿಸಿಕೊಳ್ಳಲು ಹಾಗೂ 2ನೇ ಮಹಡಿಯ ಪ್ರದೇಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಉಭಯತ್ರರು ಕೂಡಿ ನಿಗಧಿಪಡಿಸಿದ ದರಕ್ಕೆ ಗುತ್ತಿಗೆಗೆ ನೀಡಲು. | ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿಎಂಡಿ 2002, ದಿನಾಂಕ:02-06-2003ರ ಕಂಡಿಕೆ (ಗಿ) ಸಾರ್ವಜನಿಕ ಬಹಿರಂಗ ಹರಾಜಿನಿಂದ ಸಡಿಲಿಸಿ, ಗುತ್ತಿಗೆ ನೀಡುವುದರ ಬಗ್ಗೆ ನಿರ್ಣಯಿಸಲಾಗಿರುತ್ತದೆ.<br>ದೇಶಿಯ ವ್ಯಾಯಾಮ ಶಾಲೆಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು 28-03-2016ನೇ ಸಾಲಿನ ಉಪ ನೊಂದಾಣಿ ಅಧಿಕಾರಿ ಇಲಾಖೆಯ ಮಾರ್ಗಸೂಚಿ ದರದಂತೆ ಬಾಡಿಗೆ ದರವನ್ನು ಲೆಕ್ಕಾಚಾರ ಮಾಡಿ 2ನೇ ಅಂತಸ್ತಿನಲ್ಲಿರುವ 4670.00 ಪ್ರತಿ ಚದರಡಿಗೆ ರೂ.96/- ಗಳಂತೆ ಪ್ರತಿ ತಿಂಗಳಿಗೆ 4,45,875/- ಗಳಾಗುತ್ತದೆ ಎಂದು ವರದಿಸಿರುತ್ತಾರೆ. |
| ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಪಾಲಿಕೆಗೆ ಗುತ್ತಿಗೆಗೆ ನೀಡುವ ಸದರಿ ಎರಡನೇ ಮಹಡಿ ಕಟ್ಟಡವನ್ನು ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿಎಂಡಿ 2002, ದಿನಾಂಕ:02-06-2003ರ ಕಂಡಿಕೆ (ಗಿ) ನ್ನು ಸಡಿಲಿಸಿ, ದೇಶಿಯ ವ್ಯಾಯಾಮ ಶಾಲೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಗುತ್ತಿಗೆ ನೀಡಲು. | ಕಂಡಿಕೆ (79) ರಲ್ಲಿ ನಿಕಟಪೂರ್ವ ಪೂಜ್ಯ ಮಹಾಪೌರರಾದ ಶ್ರೀ.ಕಟ್ಟೆ ಸತ್ಯನಾರಾಯಣ ರವರು ಮಾನ್ಯ ಆಯುಕ್ತರವರಲ್ಲಿ ಹಾಗೂ ಮಹಾಪೌರರಲ್ಲಿ ಮನವಿಯನ್ನು ಸಲ್ಲಿಸಿ ಗುತ್ತಿಗೆ ದರದಲ್ಲಿ ರಿಯಾಯಿತಿಯನ್ನು ಕೋರಿರುತ್ತಾರೆ. ಆದರೆ, ಇದರ ಬಗ್ಗೆ ಉಪ ಆಯುಕ್ತರು ಮತ್ತು ಜಂಟಿ ಆಯುಕ್ತರವರು ಯಾವುದೇ ರೀತಿಯ ತಮ್ಮ ಅಭಿಪ್ರಾಯವನ್ನು ಮಂಡಿಸಿರುವುದಿಲ್ಲ. |

1. ಕಂಡಿಕೆ (83) ರಲ್ಲಿ ಉಪ ಆಯುಕ್ತರು ಮತ್ತು ಜಂಟಿ ಆಯುಕ್ತರು ಬಿಎಂಟಿಸಿ ರವರ ಮನವಿಯಂತೆ ಬಿಎಂಟಿಸಿ ರವರ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿಲ್ಲದ ಕಾರಣ ಸದರಿ ನಿವೇಶನವನ್ನು ಖರೀದಿಸಲು ಕಷ್ಟಕರವಾಗಿರುವುದರಿಂದ ಸಂಸ್ಥೆಗೆ ಉಚಿತವಾಗಿ ಸದರಿ ನಿವೇಶನವನ್ನು ಒದಗಿಸುವ ಸಂಬಂಧ ಪಾಲಿಕೆಯ ಸಭೆಯು ಒಪ್ಪಿಗೆ ಪಡೆದು ಸರ್ಕಾರದ ಆದೇಶಕ್ಕಾಗಿ ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಿಕೊಡಲು ಅಭಿಪ್ರಾಯದೊಂದಿಗೆ ಟಿಪ್ಪಣಿಯನ್ನು ಮಂಡಿಸಿರುತ್ತಾರೆ.

2ಎ) ದೇಶಿಯ ವ್ಯಾಯಾಮ ಶಾಲೆಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು 28–03–2016ನೇ ಸಾಲಿನ ಉಪ ನೊಂದಾಣಿ ಅಧಿಕಾರಿ ಇಲಾಖೆಯ ಮಾರ್ಗಸೂಚಿ ದರದಂತೆ ಬಾಡಿಗೆ ದರವನ್ನು ಲೆಕ್ಕಾಚಾರ ಮಾಡಿ 2ನೇ ಅಂತಸ್ತಿನಲ್ಲಿರುವ 4670.00 ಪ್ರತಿ ಚದರಡಿಗೆ ರೂ.96/– ಗಳಂತೆ ಪ್ರತಿ ತಿಂಗಳಿಗೆ 4,45,875/– ಗಳಾಗುತ್ತದೆ ಎಂದು ವರದಿಸಿರುತ್ತಾರೆ.

2ಬಿ) ಕಂಡಿಕೆ (79) ರಲ್ಲಿ ನಿಕಟಪೂರ್ವ ಪೂಜ್ಯ ಮಹಾಪೌರರಾದ ಶ್ರೀ.ಕಟ್ಟೆ ಸತ್ಯನಾರಾಯಣ ರವರು ಮಾನ್ಯ ಆಯುಕ್ತರವರಲ್ಲಿ ಹಾಗೂ ಮಹಾಪೌರರಲ್ಲಿ ಮನವಿಯನ್ನು ಸಲ್ಲಿಸಿ ಗುತ್ತಿಗೆ ದರದಲ್ಲಿ ರಿಯಾಯಿತಿಯನ್ನು ಕೋರಿರುತ್ತಾರೆ. ಆದರೆ, ಇದರ ಬಗ್ಗೆ ಉಪ ಆಯುಕ್ತರು ಮತ್ತು ಜಂಟಿ ಆಯುಕ್ತರವರು ಯಾವುದೇ ರೀತಿಯ ತಮ್ಮ ಅಭಿಪ್ರಾಯವನ್ನು ಮಂಡಿಸಿರುವುದಿಲ್ಲ.

ಪಾಲಿಕೆಯ ಆರ್ಥಿಕ ಪರಿಸ್ಥಿತಿ ಹಾಗೂ cannons of propriety ರಡಿಯಲ್ಲಿ ಹಾಲಿ ಈ ಮೇಲಿನ ಅಭಿಪ್ರಾಯದ ಮನವಿಗಳನ್ನು ಪರಿಗಣಿಸುವುದು ಕಷ್ಟ ಸಾಧ್ಯವಾಗಿರುತ್ತದೆ.

ಪಾಲಿಕೆಯ ಕೆ.ಎಂ.ಸಿ.ಕಾಯ್ದೆ 1976 ರ ನಿಯಮ 176 (6) ರಂತೆ Not with standing anything contained in this Act —

c) No movable property exceeding such sum in value as may be prescribed shall be sold otherwise than by public auction;

d) (i) No property whether movable or immovable of whatever value shall be transferred free of cost or for an upset price;

(ii) no lease of any immovable property exceeding five years shall be granted;

(iii) no immovable property shall be disposed of by sale or by other transfer;

Except with the previous sanction of the Government. ಎಂದಿರುತ್ತದೆ.

ಈ ಮೇಲಿನ ವಾಸ್ತವಾಂಶವನ್ನು ಚರ್ಚೆಗಾಗಿ ಸಲ್ಲಿಸುತ್ತಾ, ಬಿಎಂಟಿಸಿ ರವರು ಸರ್ಕಾರ ನಿಗಧಿಪಡಿಸಿರುವ ಶೇ 50%ರ ಮಾರುಕಟ್ಟೆ ಬೆಲೆಯಾದ ರೂ.1,75,50,000/– ಗಳನ್ನು ಮನ್ನಾ ಮಾಡಿ ಉಚಿತವಾಗಿ ಸಂಸ್ಥೆಗೆ ನೀಡಲು ಹಾಗೂ ದೇಶಿಯ ವ್ಯಾಯಾಮ ಶಾಲೆಗೆ ಪಾಲಿಕೆ ವತಿಯಿಂದ ನಿಗಧಿಪಡಿಸಿರುವ ಮಾಹೆಯಾನ ರೂ.4,45,875/– ಗಳಲ್ಲಿ ರಿಯಾಯಿತಿ ಕೋರಿರುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಪಾಲಿಕೆಯ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಜಂಟಿ ಸಭೆ, ಪಾಲಿಕೆ ಸಭೆ ಮುಂದೆ ಮಂಡಿಸಿಕೊಂಡು ಸೂಕ್ತ ತೀರ್ಮಾನಕೈಗೊಂಡು ಸಕ್ಷಮ ಪ್ರಾಧಿಕಾರವಾದ ಘನ ಸರ್ಕಾರಕ್ಕೆ ಮಂಡಿಸಲು ಸಲ್ಲಿಸಿರುವ ಟಿಪ್ಪಣಿಯ ಮೇರೆಗೆ **“ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ–154 ಬಸವನಗುಡಿ 1ನೇ ಮುಖ್ಯರಸ್ತೆಯ ಎನ್.ಆರ್. ಕಾಲೋನಿ ಅಂಗಡಿ ಬೀದಿ ಮಧ್ಯೆ ಇರುವ**

**130x60 ಅಡಿಗಳ ಸ್ವತ್ತನ್ನು ಸಾರ್ವಜನಿಕರಿಗೆ ಸಾರಿಗೆ ಮೂಲ ಸೌಕರ್ಯಗಳನ್ನು ಒದಗಿಸಲು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಮಾರಾಟ ಮಾಡುವ ಕುರಿತಂತೆ ಸರ್ಕಾರದ ಆದೇಶ ಸಂಖ್ಯೆ: ನಅಇ 104 ಎಂಎನ್‌ಜಿ 2013,**

**ಬೆಂಗಳೂರು, ದಿನಾಂಕ:13–10–2014ರ ರೀತ್ಯ ನಿಗಧಿಪಡಿಸಿರುವ ದರಗಳಂತೆ ಕ್ರಯಕ್ಕೆ ನೀಡಲು ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ನಿರ್ಮಿಸುವ ಕಟ್ಟಡದ ಎರಡನೇ ಮಹಡಿಯ ಕಟ್ಟಡವನ್ನು ಪಾಲಿಕೆ ವತಿಯಿಂದ ದೇಶಿಯ ವ್ಯಾಯಾಮ ಶಾಲೆಗೆ ಕರಾರು ದಿನಾಂಕದಿಂದ 5 ವರ್ಷದ ಅವಧಿಗೆ ಗುತ್ತಿಗೆಗೆ ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆಯ ದಿನಾಂಕ: 19.07.2016ರ ನಿರ್ಣಯ.**

**ನಿರ್ಣಯ: ವಿಶೇಷ ಆಯುಕ್ತರು (ಆಸ್ತಿಗಳು) ರವರ ದಿನಾಂಕ: 08.07.2016ರ ಟಿಪ್ಪಣಿಯನ್ನು ಒಪ್ಪುತ್ತಾ, ದೇಶಿಯ ವ್ಯಾಯಾಮ ಶಾಲೆಗೆ ಮಾಹೆಯಾನ ರೂ.45,875/– ರೂ.ಗಳ ಬಾಡಿಗೆ ಮೊತ್ತವನ್ನು ನಿಗಧಿಪಡಿಸಲು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/39/2016–17***

ವಿಶೇಷ ಆಯುಕ್ತರು (ಹಣಕಾಸು) ರವರ ದಿನಾಂಕ: 23.07.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ: ನಅಇ/199/ಎಸ್.ಎಫ್.ಸಿ/2016 ಬೆಂಗಳೂರು ದಿನಾಂಕ: 21–06–2016ರ ಆದೇಶದಲ್ಲಿ 2016–17 ಮತ್ತು 2017–18 ಸಾಲಿಗಳಲ್ಲಿ ನಗರೋತ್ಥಾನ ಮತ್ತು ವಿಶೇಷ ಮೂಲಭೂತ ಸೌಕರ್ಯ (SIP Project works) ಬಂಡವಾಳ ಯೋಜನೆಯಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರೂ. 7300–00 ಕೋಟಿಗಳ ಕ್ರಿಯಾ ಯೋಜನೆ Annexure-1 to Annexure-18 ರ ವರೆಗಿನ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದೆ.

ಅ. ವಿಶೇಷ ಬಂಡವಾಳ **(SIP Project works) - P3158**

| ಕ್ರಮ ಸಂಖ್ಯೆ | 2016–17 | | | 2017–18 | | | 2016–17+2017–18 ( ರೂ. ಕೋಟಿಗಳಲ್ಲಿ) | | |
|---|---|---|---|---|---|---|---|---|---|
| | ಚಾಲ್ತಿ ಕಾಮಗಾರಿಗಳು | ಮುಂದುವರೆದ ಕಾಮಗಾರಿಗಳು | ಒಟ್ಟು | ಚಾಲ್ತಿ ಕಾಮಗಾರಿಗಳು | ಮುಂದುವರೆದ ಕಾಮಗಾರಿಗಳು | ಒಟ್ಟು | ಚಾಲ್ತಿ ಕಾಮಗಾರಿಗಳು | ಮುಂದುವರೆದ ಕಾಮಗಾರಿಗಳು | ಒಟ್ಟು |
| 1 | 1508.00 | 650.00 | 2158.00 | 2451.00 | 826.00 | 3277.00 | 3959.00 | 1476.00 | 5435.00 |

ಆ. ನಗರೋತ್ಥಾನ ಯೋಜನೆ ಕಾಮಗಾರಿಗಳು **P-3106**

| | | | | | | | | | |
|---|---|---|---|---|---|---|---|---|---|
| 2 | 400.00 | 600.00 | 1000.00 | 715.00 | 100.00 | 815.00 | 1115.00 | 700.00 | 1815.00 |

ಇ. ಕೆರೆ ಅಭಿವೃದ್ಧಿ **P2741**

| | | | | | | | | | |
|---|---|---|---|---|---|---|---|---|---|
| 3 | 50.00 | 0.00 | 50.00 | 0.00 | 0.00 | 0.00 | | | |
| ಒಟ್ಟು | 1958.00 | 1250.00 | 3208.00 | 3166.00 | 926.00 | 4092.00 | 5124.00 | 2176.00 | 7300.00 |

ಮೇಲ್ಕಂಡ ಅನುಬಂಧದಲ್ಲಿ ತಿಳಿಸಿರುವ ಮೊತ್ತಗಳಲ್ಲಿ (Spillover works) ಮುಂದುವರೆದ ಕಾಮಗಾರಿಗಳ ಮೊತ್ತದ ಕಾಮಗಾರಿಗಳಿಗೆ ಹಿಂದಿನ ಆರ್ಥಿಕ ಸಾಲುಗಳಲ್ಲಿ ಈಗಾಗಲೇ ಜಾಬ್‌ಸಂಖ್ಯೆ ನೀಡಲಾಗಿರುತ್ತದೆ. Annexure-11 ರಲ್ಲಿನ ಮುಂದುವರೆದ ಕಾಮಗಾರಿಗಳ ಮೊತ್ತ ರೂ. 1476.00 ಕೋಟಿಗಳ ಪೈಕಿ ಕ್ರಮಸಂಖ್ಯೆ 5 ರಿಂದ 14ರ ವರೆಗಿನ ರೂ. 476.00 ಕೋಟಿಗಳಿಗೆ ಜಾಬ್‌ಸಂಖ್ಯೆ ನೀಡಬೇಕಿರುತ್ತದೆ. ಪೂಜ್ಯ ಮಹಾಪೌರರು ಮತ್ತು ಮಾನ್ಯ ಆಯುಕ್ತರು ದಿನಾಂಕ 28–6–2016 ರಂದು ನೆಡೆದ ಸಭೆಯಲ್ಲಿ ರೂ. 7300.00 ಕೋಟಿಗಳ ಸರ್ಕಾರದ ಅನುದಾನವನ್ನು 2016–17 & 2017–18 ಸಾಲಿಗೆ ಬಿಡುಗಡೆ ಮಾಡುತ್ತಿರುವುದರಿಂದ ಕಾಮಗಾರಿಗಳಿಗೆ ಒಟ್ಟಾಗಿ ಟೆಂಡರ್ ಕರೆದು ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿರುವುದರಿಂದ 2016–17ನೇ ಸಾಲಿಗೆ ಜಾಬ್‌ಸಂಖ್ಯೆ ನೀಡಲು ಕ್ರಮವಹಿಸಲು ಸೂಚಿಸಿರುತ್ತಾರೆ.

2016–17 ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ ಪಿ3158 SIP Project works, Nagarothana works P3106 ಅಡಿ ಮೀಸಲಿಟ್ಟಿರುವ ಅನುದಾನದ ವಿವರಗಳು ಕೊರತೆ ಅನುದಾನದ ವಿವರ ಈ ಕೆಳಕಂಡಂತಿದೆ.

| ಲೆಕ್ಕಶೀರ್ಷಿಕೆ | ಚಾಲ್ತಿ ಕಾಮಗಾರಿಗಳಿಗೆ ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಸರ್ಕಾರದ ಅನುದಾನದ 2016–17 ರ ಮೊತ್ತ | ಸರ್ಕಾರದ ಅನುದಾನದ 2017–18ರ ಸಾಲಿನ ಮೊತ್ತ | Annexure-11 ರಲ್ಲಿನ ಕಾಮಗಾರಿಯ ಮೊತ್ತ | 2016–17 & 2017–18 ರ ಒಟ್ಟಾರೆ ಮೊತ್ತ | ಕೊರತೆ ಅನುದಾನ |
|---|---|---|---|---|---|---|
| ಪಿ3158 SIP Project works | 1496.00 | 1508.00 | 2451.00 | 476.00 | 4435.00 | 2939.00 |
| Nagarothana works P3106 | 0.00 | 400.00 | 715.00 | 0.00 | 1115.00 | 1115.00 |
| Total | 1496.00 | 1908.00 | 3166.00 | 476.00 | 5550.00 | 4054.00 |

2016–17ನೇ ಸಾಲಿನ ಆಯವ್ಯಯದಲ್ಲಿ P–3158 SIP Project works ಅಡಿ Current Works ಗಳಿಗೆ ರೂ. 1496.00 ಕೋಟಿಗಳ ಅನುದಾನ ಮೀಸಲಿರಿಸಿದ್ದು, IFMS ತಂತ್ರಾಂಶದಲ್ಲಿ ರೂ. 1496.00 ಕೋಟಿಗಳಿಗೆ ಮಾತ್ರ ಜಾಬ್‌ಸಂಖ್ಯೆ ನೀಡಲು ಅವಕಾಶವಿರುತ್ತದೆ. ನಗರೋತ್ಥಾನದ ಕಾಮಗಾರಿಗಳು ಪಿ3106 ಅಡಿ Current Works ಗಳಿಗೆ ಆಯವ್ಯಯದಲ್ಲಿ ಅನುದಾನ ಮೀಸಲಿರಿಸಿರುವುದಿಲ್ಲ. **ಸರ್ಕಾರದ ಅನುಮೋದನೆಯಂತೆ** 2016–17 & 2017–18 ನೇ ಸಾಲಿನ ಮೊತ್ತಗಳಿಗೆ, 2016–17ನೇ ಸಾಲಿಗೆ ಜಾಬ್‌ಸಂಖ್ಯೆ ನೀಡಲು ಪಿ3158 ಅಡಿ ರೂ. 2939.00 ಕೋಟಿಗಳು ಹಾಗೂ ಪಿ3106 ಅಡಿ ರೂ. 1115.00 ಕೋಟಿ ಒಟ್ಟು 4054.00 ಕೋಟಿಗಳ ಅನುದಾನದ ಕೊರತೆ ಇರುತ್ತದೆ. 2017–18ನೇ ಸಾಲಿನ ಮೊತ್ತಗಳಿಗೆ 2016–17ನೇ ಸಾಲಿನಲ್ಲಿ ಕೊರತೆ ಅನುದಾನದ ಮೊತ್ತ ರೂ. 4054.00 ಕೋಟಿಗಳನ್ನು ಪಿ–3158 ಮತ್ತು ಪಿ3106 ಅಡಿ ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಹಣಕಾಸು) ರವರ ದಿನಾಂಕ: 23.07.2016ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

(ಎಮ್. ಶಿವರಾಜು)
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**